# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಜುಲೈ 11, 2020

ಸಂಪುಟ : 47 ಸಂಚಿಕೆ : 62 ದೂರವಾಣಿ : 254736 ವಾಟ್ಸ್ಆ್ಯಪ್ : 91642 99999 ಪುಟ : 4 ರೂ : 3.00 www.janathavani.com Email: janathavani@mac.com




**ಅಜ್ಜಿ ಹಬ್ಬ** ದಾವಣಗೆರೆಯಲ್ಲಿ ಶುಕ್ರವಾರ ಅಜ್ಜಿ ಹಬ್ಬವನ್ನು ಆಚರಿಸಲಾಯಿತು. ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನಕ್ಕೆ ಭಕ್ತರು ಎಡೆ ಮಾಡಿ ತಂದು ಅರ್ಪಿಸಿದರು.

# ಪರೀಕ್ಷೆ ಇಲ್ಲದೆ ಪಾಸ್

## ಅಂತಿಮ ಸೆಮಿಸ್ಟರ್ ಬಿಟ್ಟು ಉಳಿದೆಲ್ಲರನ್ನು ಪಾಸ್ ಮಾಡಲು ತೀರ್ಮಾನ

ಬೆಂಗಳೂರು, ಜು. 10 - ಇಂಜಿನಿಯರಿಂಗ್ ಸೇರಿದಂತೆ ಪದವಿ, ಸ್ನಾತಕೋತ್ತರ, ಡಿಪ್ಲೋಮಾ ತರಗತಿಗಳಲ್ಲಿ ಓದುತ್ತಿರುವ ಅಂತಿಮ ಸೆಮಿಸ್ಟರ್ ಇಲ್ಲವೇ ಅಂತಿಮ ವರ್ಷದ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಉಳಿದೆಲ್ಲ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ಪಾಸ್ ಮಾಡುವ ಮಹತ್ತರದ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ.

ಸರ್ಕಾರದ ಈ ನಿರ್ಧಾರಕ್ಕೆ ರಾಜ್ಯಪಾಲರು ಅಂಗೀಕಾರ ನೀಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉನ್ನತ ಶಿಕ್ಷಣ ಸಚಿವರೂ ಆಗಿರುವ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ್, ಕೊರೊನಾ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷೆಯೇ ಇಲ್ಲದೆ, ವಿದ್ಯಾರ್ಥಿಗಳನ್ನು ಪಾಸ್ ಮಾಡುವ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

2019-20ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಅಂತಿಮ ಸೆಮಿಸ್ಟರ್ ಇಲ್ಲವೇ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಯುಜಿಸಿ ಮಾರ್ಗಸೂಚಿ ಅನ್ವಯ ಸೆಪ್ಟೆಂಬರ್ ಅಂತ್ಯದೊಳಗೆ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ.

ವಿದ್ಯಾರ್ಥಿಗಳ ಆರೋಗ್ಯ ಮತ್ತು ಭವಿಷ್ಯವನ್ನು ಗಣನೆಗೆ ತೆಗೆದುಕೊಂಡು ಶಿಕ್ಷಣ ತಜ್ಞರು, ವಿವಿಗಳ ಕುಲಪತಿಗಳ ಜತೆ ನಿರಂತರ ಸಮಾಲೋಚನೆ ನಡೆಸಿದ ನಂತರ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ.

ಕೊರೊನಾ ಇಡೀ ಶೈಕ್ಷಣಿಕ ವ್ಯವಸ್ಥೆಯನ್ನು ಬುಡಮೇಲು ಮಾಡಿದೆ. ಸಕಾಲಕ್ಕೆ ತರಗತಿಗಳನ್ನು ನಡೆಸಲು ಸಾಧ್ಯವಾಗಲಿಲ್ಲ. ಲಾಕ್‌ಡೌನ್ ಸಂದರ್ಭದಲ್ಲಿ ಆನ್‌ಲೈನ್ ಮೂಲಕ ಶಿಕ್ಷಣ ನೀಡಿದ್ದಕ್ಕೆ ಒಳ್ಳೆಯ ಪ್ರತಿಕ್ರಿಯೆ ಕೂಡ ಬಂದಿದೆ.



**ಅಂತಿಮ ಸೆಮಿಸ್ಟರ್ ಇಲ್ಲವೇ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಯುಜಿಸಿ ಮಾರ್ಗಸೂಚಿ ಅನ್ವಯ ಸೆಪ್ಟೆಂಬರ್ ಅಂತ್ಯದೊಳಗೆ ಪರೀಕ್ಷೆ ನಡೆಸಲು ನಿರ್ಧಾರ**

ಸಾಧ್ಯವಾದಷ್ಟು ಎಲ್ಲರನ್ನೂ ತಲುಪಲು ಪ್ರಾಮಾಣಿಕ ಪ್ರಯತ್ನ ನಡೆಸಲಾಯಿತು. ಇದರ ನಡುವೆ ಕೆಲವು ದಿನಗಳು ತರಗತಿಗಳನ್ನು ನಡೆಸಿ, ಪರೀಕ್ಷೆ ಮಾಡುವ ಚಿಂತನೆಯೂ ಇತ್ತು. ಆದರೆ, ಕೊರೊನಾ ವ್ಯಾಪಕವಾಗಿ ಹಬ್ಬುತ್ತಿರುವ ಕಾರಣಕ್ಕೆ ಅವೆಲ್ಲವನ್ನೂ ಕೈಬಿಟ್ಟು ಮಧ್ಯಂತರ ಸೆಮಿಸ್ಟರ್/ವರ್ಷದ ವಿದ್ಯಾರ್ಥಿಗಳನ್ನು ಉತ್ತೀರ್ಣಗೊಳಿಸಲು ನಿರ್ಧರಿಸಲಾಯಿತು.

ಅಂತಿಮ ವರ್ಷ/ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ, ಸೆಪ್ಟೆಂಬರ್ ತಿಂಗಳ ಅಂತ್ಯದೊಳಗೆ ಪರೀಕ್ಷೆಗಳನ್ನು (ಆನ್‌ಲೈನ್/ಆಫ್‌ಲೈನ್) ನಡೆಸಲು ಆಯಾ ವಿಶ್ವವಿದ್ಯಾಲಯಗಳಿಗೇ ಸೂಚಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ. ಮಧ್ಯಂತರ ಸೆಮಿಸ್ಟರ್/ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಆಂತರಿಕ ಮೌಲ್ಯಮಾಪನ ಮತ್ತು ಹಿಂದಿನ ಸೆಮಿಸ್ಟರ್/ವರ್ಷದ ಅಂಕಗಳ (50:50) ಸಮಗ್ರ ಮೌಲ್ಯಮಾಪನದ ಆಧಾರದ ಮೇಲೆ ತೇರ್ಗಡೆ ಮಾಡಲಾಗುತ್ತದೆ. ಹಿಂದಿನ ವರ್ಷದ ಅಂಕಗಳು ಇಲ್ಲದ ವಿದ್ಯಾರ್ಥಿಗಳನ್ನು (ಉದಾ: ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳು) ಪೂರ್ಣ ಆಂತರಿಕ ಮೌಲ್ಯಮಾಪನದ ಮೂಲಕವೇ ಉತ್ತೀರ್ಣಗೊಳಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಇದರ ನಡುವೆಯೂ ತಮ್ಮ ಅಂಕಗಳನ್ನು ಉತ್ತಮಗೊಳಿಸಿಕೊಳ್ಳಬೇಕೆನ್ನುವ ವಿದ್ಯಾರ್ಥಿಗಳು ಸೆಮಿಸ್ಟರ್‌ನಲ್ಲಿ ಪ್ರತ್ಯೇಕವಾಗಿ ಪರೀಕ್ಷೆಗಳನ್ನು ಬರೆಯಲು ಅವಕಾಶ ನೀಡಲಾಗುವುದು. ಬ್ಯಾಕ್‌ಲಾಗ್ ವಿಷಯಗಳ ಕ್ಯಾರಿ ಓವರ್‌ಗೂ ಅವಕಾಶ ಇರುತ್ತದೆ ಎಂದು ಡಿಸಿಎಂ ತಿಳಿಸಿದರು.

ಹೆಚ್ಚಿನ ಮಾಹಿತಿಗಾಗಿ **(3ನೇ ಪುಟಕ್ಕೆ)**

## ಜು.30, 31ರಂದು ಸಿಇಟಿ ಪರೀಕ್ಷೆ

ಬೆಂಗಳೂರು, ಜು. 10 - ಸಿಇಟಿ ಪರೀಕ್ಷೆಗಳು ನಿಗದಿಯಂತೆ ಇದೇ ತಿಂಗಳ 30 ಮತ್ತು 31ರಂದು ನಡೆಯಲಿವೆ ಎಂದು ಉನ್ನತ ಶಿಕ್ಷಣ ಖಾತೆ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಇದಕ್ಕೆ ಬೇಕಾದ ಎಲ್ಲ ಸಿದ್ಧತೆ ಮಾಡಿಕೊಳ್ಳುವಂತೆ ಸಿಇಟಿ ಘಟಕ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಅವರು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಪಿಜಿ ಸಿಇಟಿ **(2ನೇ ಪುಟಕ್ಕೆ)**

## ಸಿಐಸಿಎಸ್‌ಇ ಫಲಿತಾಂಶ ಪ್ರಕಟ

ನವದೆಹಲಿ, ಜು. 10 - ಸಿ.ಐ.ಸಿ. ಎಸ್‌.ಇ.ಯ ಹತ್ತು ಹಾಗೂ 12ನೇ ತರಗತಿಗಳ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಲಾಗಿದೆ. ಈ ವರ್ಷದ ಕೊರೊನಾ ಪರಿಸ್ಥಿತಿಯನ್ನು ಪರಿಗಣಿಸಿ ಮೆರಿಟ್ ಪಟ್ಟಿ ಪ್ರಕಟಿಸಿಲ್ಲ.

ಕೊರೊನಾ ಕಾರಣದಿಂದಾಗಿ ಮಂಡಳಿಯು ಕೆಲ ಪರೀಕ್ಷೆಗಳನ್ನು ನಡೆಸಲು ಸಾಧ್ಯವಾಗಿರಲಿಲ್ಲ. ಪರ್ಯಾಯ ಯೋಜನೆಯ ಮೂಲಕ ವಿದ್ಯಾರ್ಥಿಗಳ **(3ನೇ ಪುಟಕ್ಕೆ)**

**ಭದ್ರಾ ಜಲಾಶಯ**

ಇಂದಿನ ಮಟ್ಟ : 146 ಅಡಿ 5 ಇಂಚು
ಒಳ ಹರಿವು : 6708 ಕ್ಯೂಸೆಕ್ಸ್
ಹೊರ ಹರಿವು : 169 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 130.8 ಅಡಿ

## ಜಿಲ್ಲೆಯಲ್ಲಿ 21 ಪಾಸಿಟಿವ್

### 11 ಜನ ಬಿಡುಗಡೆ, 91 ಸಕ್ರಿಯ ಪ್ರಕರಣ

ದಾವಣಗೆರೆ, ಜು. 10 - ಜಿಲ್ಲೆಯಲ್ಲಿ ಶುಕ್ರವಾರ 21 ಕೊರೊನಾ ಪ್ರಕರಣಗಳು ಕಂಡು ಬಂದಿದ್ದು, 11 ಜನ ಇದೇ ದಿನ ಬಿಡುಗಡೆಯಾಗಿದ್ದಾರೆ. ಇದರಿಂದಾಗಿ ಸಕ್ರಿಯ ಕೊರೊನಾ ಸೋಂಕಿತರ ಸಂಖ್ಯೆ 91ಕ್ಕೆ ಏರಿಕೆಯಾಗಿದೆ.



ದಾವಣಗೆರೆ ನಗರದ ವಿದ್ಯಾನಗರ, ಸಿದ್ದೇಶ್ವರ ಬಡಾವಣೆ, ಕೆ.ಟಿ.ಜೆ. ನಗರ, ಬಾಷಾನಗರ, ಜಾಲಿನಗರ ಹಾಗೂ ಶಾಮನೂರುಗಳಲ್ಲಿ ಕೊರೊನಾ ಪ್ರಕರಣಗಳು ಪತ್ತೆಯಾಗಿವೆ. ತಾಲ್ಲೂಕಿನ ಆರನೇಕಲ್ಲಿನಲ್ಲೂ ಒಂದು ಪ್ರಕರಣ ಪತ್ತೆಯಾಗಿದೆ.

ಹರಿಹರದ ಗಾಂಧಿನಗರ ಹಾಗೂ ಅಶೋಕ ಎಲೆಕ್ಟ್ರಾನಿಕ್ಸ್ ಬಳಿ ಸೋಂಕಿತರು ಕಂಡು ಬಂದಿದ್ದಾರೆ. ದಾವಣಗೆರೆ ನಗರದ **(3ನೇ ಪುಟಕ್ಕೆ)**

## ಸಿಎಂ ಆಪ್ತ ಸಿಬ್ಬಂದಿಗೆ ಕೊರೊನಾ

**ಮನೆಯಿಂದಲೇ ಕಾರ್ಯ ನಿರ್ವಹಿಸಲಿರುವ ಬಿಎಸ್‌ವೈ**

ಬೆಂಗಳೂರು, ಜು. 10 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೂ ಕೊರೊನಾ ಸೋಂಕಿನ ಭೀತಿ ಎದುರಾಗಿದೆ. ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿನ ಆಪ್ತ ಸಿಬ್ಬಂದಿಗಳಿಗೆ ಕೊರೊನಾ ಸೋಂಕು ತಗಲಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ಇಂದಿನಿಂದ ಸ್ವಯಂ ಕ್ವಾರಂಟೈನ್‌ಗೆ ಒಳಪಟ್ಟಿದ್ದಾರೆ.

ಸ್ವತಃ ಮುಖ್ಯಮಂತ್ರಿಯವರೇ ಟ್ವೀಟ್ ಮಾಡಿ, ತಮ್ಮ ಆಪ್ತ ಸಿಬ್ಬಂದಿಗಳಿಗೆ ಕೊರೊನಾ ತಗಲಿರುವುದನ್ನು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತಾವು ಸ್ವಲ್ಪ ದಿನಗಳ ಕಾಲ ಸಚಿವರು, ಶಾಸಕರು, ಅಧಿಕಾರಿಗಳನ್ನು ಭೇಟಿಯಾಗುವುದಿಲ್ಲ. ಏನೇ ವಿಷಯವಿದ್ದರೂ, ಫೋನ್ ಮೂಲಕ ಸಂಪರ್ಕ ಮಾಡಿ ಎಂದು ತಿಳಿಸಿದ್ದಾರೆ.

ತಮ್ಮ ಸರ್ಕಾರಿ ನಿವಾಸ ಕಾವೇರಿಯಿಂದಲೇ ವಿಡಿಯೋ ಕಾನ್ಫರೆನ್ಸ್ ಮೂಲಕ ಸಚಿವರು ಅಧಿಕಾರಿಗಳೊಟ್ಟಿಗೆ ಸಭೆ ನಡೆಸುವುದಾಗಿ ಹೇಳಿದ್ದಾರೆ.

ಮನೆಯಲ್ಲೇ ಉಳಿದು, ವಿಡಿಯೋ ಸಂವಾದದ ಮೂಲಕ ಕೊರೊನಾ ನಿಯಂತ್ರಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಲಿದ್ದೇನೆ. ಯಾರೂ ಆತಂಕಪಡುವ ಅಗತ್ಯವಿಲ್ಲ. ನಾನು ಆರೋಗ್ಯವಾಗಿದ್ದೇನೆ ಎಂದು ಸ್ಪಷ್ಟಪಡಿಸಿದ್ದಾರೆ. ತಮ್ಮ ಇಂದಿನ ಎಲ್ಲಾ **(2ನೇ ಪುಟಕ್ಕೆ)**

## ಕೆಲಸ ಬಹಿಷ್ಕರಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ದಾವಣಗೆರೆ, ಜು.10- ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿಂದು ಆಶಾ ಕಾರ್ಯಕರ್ತೆಯರು ತಮ್ಮ ಕೆಲಸ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ನಗರದ ಜಯದೇವ ವೃತ್ತದಲ್ಲಿ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಜಮಾಯಿಸಿದ್ದ ಆಶಾ ಕಾರ್ಯಕರ್ತೆಯರು, ಆರೋಗ್ಯ ಸೇವೆ ಸ್ಥಗಿತಗೊಳಿಸಿ ಪ್ರತಿಭಟನಾ ಧರಣಿ ನಡೆಸಿ, ನಂತರ ಜಿಲ್ಲಾ ಆರೋಗ್ಯಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಕೊರೊನಾ ತಡೆಯ ಹೋರಾಟದ ಯಶಸ್ಸಿಗೆ ಆಶಾ ಕಾರ್ಯಕರ್ತೆಯರು ಆಧಾರ ಸ್ಥಂಭ. ಆಶಾ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸಿ, ಅಂತರ ರಾಜ್ಯ ಪ್ರಯಾಣಿಕರು, ವಲಸೆ ಕಾರ್ಮಿಕರು ಮತ್ತು ಇತರರನ್ನು **(3ನೇ ಪುಟಕ್ಕೆ)**



## ಹರಿಹರದಲ್ಲಿ ಇಬ್ಬರಿಗೆ ಕೊರೊನಾ ಪಾಸಿಟಿವ್

ಹರಿಹರ, ಜು.10- ನಗರದಲ್ಲಿ ಇಂದು ಎರಡು ಕೊರೊನಾ ಪ್ರಕರಣಗಳು ದೃಢಪಟ್ಟಿವೆ ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್ ತಿಳಿಸಿದರು.

ನಗರದ ಹರ್ಲಾಪುರ ಬಡಾವಣೆಯ ಬ್ಯಾಡಗಿ ಗ್ರಾಮದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ 48 ವರ್ಷದ ವ್ಯಕ್ತಿಗೆ ಮತ್ತು ಇಂದ್ರಾನಗರದ 42 ವರ್ಷದ ಮಹಿಳೆ ತನಗೆ ಅನಾರೋಗ್ಯ ಇರುವುದರಿಂದ ತಪಾಸಣೆ ಮಾಡಿಸಿಕೊಂಡಿದ್ದರಿಂದ ಕೊರೊನಾ ಸೋಂಕು ದೃಢಪಟ್ಟಿದೆ.

ಹರಿಹರ ತಾಲ್ಲೂಕಿನಲ್ಲಿ ಸೋಂಕಿತರ ಸಂಖ್ಯೆ 46 ಕ್ಕೆ ಏರಿದ್ದು ಇದರಲ್ಲಿ 22 ವ್ಯಕ್ತಿಗಳು ಗುಣಮುಖರಾಗಿದ್ದಾರೆ. 5187 ವ್ಯಕ್ತಿಗಳನ್ನು ತಪಾಸಣೆಗೆ **(3ನೇ ಪುಟಕ್ಕೆ)**

## ಇ-ಮೇಲ್, ವಾಟ್ಸ್‌ಅಪ್ ಮೂಲಕವೂ ಸಮನ್ಸ್

ನವದೆಹಲಿ, ಜು. 10 – ಕೊರೊನಾ ಪರಿಸ್ಥಿತಿಯ ಹಿನ್ನೆಲೆಯಲ್ಲಿ ತಂತ್ರಜ್ಞಾನದ ಬಳಕೆ ಹೆಚ್ಚಿಸಲು ನಿರ್ಧರಿಸಿರುವ ಸುಪ್ರೀಂ ಕೋರ್ಟ್, ನ್ಯಾಯಾಲಯದ ಸಮನ್ಸ್‌ಗಳನ್ನು ವ್ಯಕ್ತಿಗಳಿಗೆ ಇ-ಮೇಲ್, ಫ್ಯಾಕ್ಸ್ ಹಾಗೂ ವಾಟ್ಸ್‌ಅಪ್ ರೀತಿಯ ಆಪ್‌ಗಳ ಮೂಲಕವೂ ಕಳಿಸಬಹುದಾಗಿದೆ ಎಂದು ಹೇಳಿದೆ. **(3ನೇ ಪುಟಕ್ಕೆ)**

## ಶಾಲಾ ಕಚೇರಿಗಳಿಗೆ ಶನಿವಾರದ ರಜೆ

ಬೆಂಗಳೂರು, ಜು. 10 - ಶಿಕ್ಷಣ ಇಲಾಖೆಯ ಎಲ್ಲಾ ಶಾಲಾ - ಕಚೇರಿಗಳಿಗೆ ಎರಡನೇ ಶನಿವಾರ ಮತ್ತು ನಾಲ್ಕನೇ ಶನಿವಾರಗಳನ್ನು ಸೇರಿಸಿಕೊಂಡಂತೆ 2020ರ ಜುಲೈ 10 ರಿಂದ ಎಲ್ಲಾ ಶನಿವಾರಗಳಂದು ರಜೆ ಇರಲಿದೆ ಎಂದು ಪ್ರಾಥಮಿಕ ಶಿಕ್ಷಣ ಇಲಾಖೆ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಶಿಕ್ಷಣ ಇಲಾಖೆಯ ಎಲ್ಲಾ ಶಾಲಾ ಕಚೇರಿಗಳಿಗೆ ಎರಡನೇ **(2ನೇ ಪುಟಕ್ಕೆ)**

## ಕೊರೊನಾ ತಂದ ಆನ್‌ಲೈನ್‌ನ ಅತಂತ್ರ ಶಿಕ್ಷಣ !

ದಾವಣಗೆರೆ, ಜು. 10 - ಕೊರೊನಾ ವೈರಸ್ ಕಾರಣದಿಂದಾಗಿ ಅತ್ತ ಶಾಲೆಗಳು ಶುರುವಾಗುತ್ತಿಲ್ಲ, ಇತ್ತ ಆನ್‌ಲೈನ್ ತರಗತಿಗಳು ಎಲ್ಲರ ಕೈಗೆಟುಕುತ್ತಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳು, ಮನೆಯಲ್ಲಿ ಇರಲಾರೆ - ಶಾಲೆಗೆ ಹೋಗಲಾರೆ ಎಂದು ಪೇಚಾಡುವ ಸ್ಥಿತಿ ತಲುಪಿದ್ದಾರೆ.

ಜೂನ್ ವೇಳೆಗೆ ಆರಂಭವಾಗಬೇಕಿದ್ದ ಶಾಲೆಗಳು, ಜುಲೈಗೆ ಮುಂದೂಡಿಕೆಯಾದವು. ಈಗ ಆಗಸ್ಟ್‌ವರೆಗೆ ಆರಂಭವಾಗುವ ಸೂಚನೆಗಳಿಲ್ಲ. ಈ ನಡುವೆಯೇ, ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಆಗಸ್ಟ್ ತಿಂಗಳ ಶಾಲಾರಂಭವೂ ಕಠಿಣವೇ ಆಗಿದೆ.

ಲಾಕ್‌ಡೌನ್ ಆರಂಭದ ವೇಳೆ ದೂರದಲ್ಲಿದ್ದ ಕೊರೊನಾ, ಜುಲೈ ವೇಳೆಗೆ ಅಕ್ಕ ಪಕ್ಕದ ಬೀದಿಗಳಲ್ಲೇ ಕಾಣಿಸಿಕೊಳ್ಳಲು ಆರಂಭಿಸಿದೆ. ಹೀಗಿರುವಾಗ ಮಕ್ಕಳನ್ನು ಶಾಲೆಗೆ ಕಳಿಸಲು ತಂದೆ - ತಾಯಿಗಳಿಗೆ ಎಂಟೆದೆಯೇ ಬೇಕು.

ಹೇಳಿ ಕೇಳಿ ಇದು ಮಾಹಿತಿ ತಂತ್ರಜ್ಞಾನದ ಯುಗ. ಮಕ್ಕಳು ಶಾಲೆಗೆ ಹೋಗದಿದ್ದರೆ ಏನಂತೆ, ಶಾಲೆಯನ್ನೇ ಮಕ್ಕಳ ಬಳಿಗೆ ತರುತ್ತೇವೆ



ಎಂದು ಆನ್‌ಲೈನ್ ಶಿಕ್ಷಣ ಹೇಳುತ್ತಿದೆ. ಆದರೆ, ಆನ್‌ಲೈನ್ ಶಿಕ್ಷಣ ಬಯಸುವ ಗ್ಯಾಡ್ಜೆಟ್ ಹಾಗೂ ಜಿ.ಬಿ.ಗಟ್ಟಲೇ ಡಾಟಾ ಹೊಂದಿಸುವುದು ಸುಲಭವೇನಲ್ಲ.

ಆನ್‌ಲೈನ್ ಶಿಕ್ಷಣಕ್ಕೆ ಶಿಕ್ಷಣ ವ್ಯವಸ್ಥೆ, ಶಿಕ್ಷಕರು, ಶಾಲಾ ಆಡಳಿತ ಮಂಡಳಿ, ಪೋಷಕರು ಹಾಗೂ ವಿದ್ಯಾರ್ಥಿಗಳೆಲ್ಲರನ್ನೂ ಸಜ್ಜುಗೊಳಿಸುವುದು ಸುಲಭದ ಮಾತಲ್ಲ. ಇದೆಲ್ಲದರ ನಡುವೆ, ಬದಲಾಗಿಯೇ ಬಿಡೋಣ ಎಂದರೆ ವಾತಾವರಣವೇ ಅನಿಶ್ಚಿತ - ಅತಂತ್ರ. ಯಾವಾಗ ಕೊರೊನಾ ಮುಗಿಯುತ್ತೆ, ಯಾವಾಗ ನೇರ ಶಾಲೆಗಳು ಆರಂಭವಾಗುತ್ತವೆ ಎಂಬುದರ ಬಗ್ಗೆ ಯಾರೂ ಸ್ಪಷ್ಟವಾಗಿ ಹೇಳುವಂತಿಲ್ಲ.

**ಮೂರೇ ತಿಂಗಳಲ್ಲಿ ಕನ್ನಡಕ :** ಪಿಯುಸಿ ವಿದ್ಯಾರ್ಥಿನಿಯಾದ ಭಾರ್ಗವಿಗೆ ಆನ್‌ಲೈನ್ ಶಿಕ್ಷಣ ಆರಂಭವಾಗಿತ್ತು. **(2ನೇ ಪುಟಕ್ಕೆ)**

### ಶಿಕ್ಷಣವಿಲ್ಲದ ವರ್ಷವೆಂದರೆ ನೀರು ಕಾಣದ ತೋಟ


ಸಮೃದ್ಧವಾಗಿ ಬೆಳೆದ ತೋಟಕ್ಕೆ ಒಂದು ವಾರ ನೀರಿಲ್ಲದಿದ್ದರೆ ಏನಾಗುತ್ತದೆ? ತೋಟ ಒಣಗಲು ಆರಂಭವಾಗುತ್ತದೆ. ಒಂದು ತಿಂಗಳು ಇಲ್ಲದಿದ್ದರೆ ತೋಟದ ನಾಶ ಆರಂಭವಾಗುತ್ತದೆ. ಇಡೀ ವರ್ಷ ನೀರಿಲ್ಲದಿದ್ದರೆ? ತೋಟದ ಗತಿ ಅಧೋಗತಿ.

ಅದೇ ರೀತಿ ಮಕ್ಕಳ ಶಿಕ್ಷಣ. ಇಡೀ ವರ್ಷ ಶಿಕ್ಷಣ ಇಲ್ಲದಿದ್ದರೆ ಮಕ್ಕಳ ಸುದೀರ್ಘ ಕಾಲದ ಕಲಿಕೆಯೇ ಹಾಳಾಗಬಹುದು. ಸಮಸ್ಯೆ ಉಲ್ಬಣಿಸಿದರೆ ಒಂದಿಡೀ ಪೀಳಿಗೆಯ ಮೇಲೆಯೇ ಪರಿಣಾಮವಾಗಬಹುದು ಎಂದು ಶಿಕ್ಷಕರು ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಆನ್‌ಲೈನ್ ಮೂಲಕ ಶಿಕ್ಷಣ ಪಡೆಯುವುದು **(2ನೇ ಪುಟಕ್ಕೆ)**

## ಆತ್ಮನಿರ್ಭರ್ ಭಾರತ ಪ್ಯಾಕೇಜ್ ನವಭಾರತ ನಿರ್ಮಾಣಕ್ಕೆ ಬುನಾದಿ

ದಾವಣಗೆರೆ, ಜ. 10- ಕೊರೊನಾ ಸಾಂಕ್ರಾಮಿಕ ರೋಗದಿಂದ ತತ್ತರಿಸಿದ್ದ ಭಾರತದ ಆರ್ಥಿಕತೆ ನರೇಂದ್ರ ಮೋದಿ ಅವರು ಘೋಷಿಸಿದ ಆತ್ಮ ನಿರ್ಭರ್ ಭಾರತ ಪ್ಯಾಕೇಜ್‌ನಿಂದಾಗಿ ವೃದ್ಧಿಯತ್ತ ಸಾಗಿದೆ ಎಂದು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ಭಾರತದ ಆರ್ಥಿಕತೆಯ ವಿಷಯದಲ್ಲಿ ಆತ್ಮ ನಿರ್ಭರ್ ಪ್ಯಾಕೇಜ್ ಅತ್ಯಂತ ಪ್ರಮುಖ ಪಾತ್ರ ವಹಿಸಿರುವುದು ಮಾತ್ರವಲ್ಲ, ನವಭಾರತ ನಿರ್ಮಾಣಕ್ಕೆ ಭದ್ರ ಬುನಾದಿಯಾಗಿದೆ. ಇಂದು ಇಡೀ ಜಗತ್ತು ಭಾರತವನ್ನು ವಿಶೇಷ ದೃಷ್ಟಿಯಿಂದ ನೋಡುವಂತಾಗಿದೆ. ಇದಕ್ಕೆ ಕಾರಣ ಸರ್ಕಾರದ ನೇತೃತ್ವ ವಹಿಸಿರುವ ನರೇಂದ್ರ ಮೋದಿ ಹಾಗೂ ಅವರ ಸಮರ್ಥ ನಾಯಕತ್ವ



ಎಂದು ಪತ್ರಿಕಾ ಪ್ರಕಟಣೆಯಲ್ಲಿ ಅವರು ವಿಶ್ಲೇಷಿಸಿದ್ದಾರೆ.

ಆತ್ಮ ನಿರ್ಭರ್ ಪ್ಯಾಕೇಜ್‌ನಡಿ ಒಂದು ಕಡೆ ಸಣ್ಣ, ಸತಿಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಕಲ್ಯಾಣಕ್ಕಾಗಿ 16 ಯೋಜನೆಗಳ ಘೋಷಣೆ, ಇನ್ನೊಂದು ಕಡೆ ಬಡವರಿಗಾಗಿ, ಶೋಷಿತರಿಗಾಗಿ, ಕೂಲಿ ಕಾರ್ಮಿಕರಿಗಾಗಿ, ರೈತರಿಗಾಗಿ ಹತ್ತು ಹಲವು ಘೋಷಣೆಗಳನ್ನು ಅನುಷ್ಠಾನಗೊಳಿಸಿದ್ದಾರೆ.

ನರೇಂದ್ರ ಮೋದೀಜಿಯವರ ವೋಕಲ್ ಫಾರ್ ಲೋಕಲ್ ಅಂಡ್ ಮೇಕ್ ಇಟ್ ಗ್ಲೋಬಲ್ ಆಂದೋಲನ ಪ್ರತಿಯೊಂದು ವಲಯದಲ್ಲೂ ಕೂಡ ಭಾರತವನ್ನು ಸ್ವಾವಲಂಬಿಯಾಗಿಸುವತ್ತ ಕೊಂಡೊಯ್ಯುತ್ತಿದೆ. ಈ ಒಂದು ಆಂದೋಲನ ಸ್ಥಳೀಯ ಉದ್ದಿಮೆದಾರರನ್ನು ಸಬಲಗೊಳಿಸಲಿದೆ.

ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಯೋಜನೆಯ ಮೂಲಕ ರೂ.1.70 ಲಕ್ಷ ಕೋಟಿ ಪ್ಯಾಕೇಜ್ ಘೋಷಣೆ ಮಾಡಿದ ನಂತರ ಇದಕ್ಕೆ ಪೂರಕವಾಗಿ ಕೊರೊನಾ ವೈರಸ್‌ನಿಂದ ನಲುಗಿದ ಭಾರತದ ಆರ್ಥಿಕತೆಯನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಸ್ವಾವಲಂಬಿ ಭಾರತದ ನಿರ್ಮಾಣಕ್ಕಾಗಿ 20 ಲಕ್ಷ ಕೋಟಿ ರೂ ಮೊತ್ತದ ಬೃಹತ್ ಪ್ಯಾಕೇಜ್ ಘೋಷಣೆ ಮಾಡಿದರು. ಇದರಲ್ಲಿ 5.94 ಲಕ್ಷ ಕೋಟಿ ರೂ.ಗಳನ್ನು ಜನರಿಗೆ ಹೆಚ್ಚು ಉದ್ಯೋಗ ಒದಗಿಸುವ **(3ನೇ ಪುಟಕ್ಕೆ)**

**KHB ಸೈಟು ಮಾರಾಟಕ್ಕೆ**
ಕರ್ನಾಟಕ ಗೃಹ ಮಂಡಳಿಯಲ್ಲಿ (ಜೆನಿಸಿಸ್ ಹೋಟೆಲ್ ಎದುರು ಭಾಗದಲ್ಲಿ) 30x50, 30x50 ಉತ್ತರ ಜೋಡಿ, 40x60, 40x60 ದಕ್ಷಿಣ ಜೋಡಿ, 40x50 ಉತ್ತರ, 40x60 ಉತ್ತರ, 30x50 ಪೂರ್ವ, 30x40 ದಕ್ಷಿಣ, 30x50 ಪಶ್ಚಿಮ, 40x60 ಪಶ್ಚಿಮ.
ಕಿರಣ್ ಬೂಸ್ನೂರ್ : 97315-63409

**ಮನೆ ಲೀಸ್‌ಗೆ ಇದೆ**
ಎರಡನೇ ಮಹಡಿಯ 2 ಬೆಡ್ ರೂಂವುಳ್ಳ ಮನೆ ಲೀಸ್‌ಗೆ ಇದೆ. ಲೀಸ್ ಹಣ 4,50,000/- (ನಾಲ್ಕು ಲಕ್ಷ ಐವತ್ತು ಸಾವಿರ ರೂ.) ಕುಂದುವಾಡ ರಸ್ತೆ, ಬಸವೇಶ್ವರ ನಗರ, ದಾವಣಗೆರೆ.
97315 13339

**ಸೈಟು ಮಾರಾಟಕ್ಕೆ (15 ಲಕ್ಷಕ್ಕೆ)**
ಶಾಮನೂರಿನ ಡಾಲರ್ಸ್ ಕಾಲೋನಿ ಮುಂದೆ ಡಬಲ್ ರೋಡ್ ನ ಪಾರ್ಕ್ ಎದುರು 30x36 ಉತ್ತರ, 30x37 ಉತ್ತರ
ಕಿರಣ್ ಬೂಸ್ನೂರ್ (ಏಜೆಂಟ್)
ಮೊ.97315-63409

**ಕರ್ನಾಟಕ ಗೃಹಮಂಡಳಿಯಲ್ಲಿ**
ಮನೆಗಳು, ಸೈಟುಗಳು 30×40 North ಮನೆ, 30×50 North ಮನೆ, 50×80 East, 50×80 South, 50×80 West, 40×60 North, 40×50 North
ಐನಳ್ಳಿ ಚನ್ನಬಸಪ್ಪ, ಏಜೆಂಟ್
9916612110, 9341014130

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಎರೆಹುಳು ಗೊಬ್ಬರ ಹಾಗೂ ಸಿಟಿ ಕಾಂಪೋಸ್ಟ್ ದೊರೆಯುತ್ತದೆ**
License No - JDA/F&PP/KAR/FE19-200282/2019-20
93411 71212, 81054 98069

**ಮನೆ ಬಾಡಿಗೆ/ಲೀಜ್‌ಗೆ**
ಭಗೀರಥ ಸರ್ಕಲ್ ಹತ್ತಿರ 10×30 ವಿಸ್ತೀರ್ಣದ ಚಿಕ್ಕ ಮನೆಗಳು ಬಾಡಿಗೆಗೆ/ಲೀಜ್‌ಗೆ ದೊರೆಯುತ್ತವೆ. ಸಂಪರ್ಕಿಸಿ
ಮೊ. 94484 39639

**ಸೈಟ್, ಮನೆ ಮಾರಾಟಕ್ಕೆ ಬೇಕಾಗಿದೆ**
ವಿದ್ಯಾನಗರ, ತರಳುಬಾಳು ಮತ್ತು ವಿನಾಯಕ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ ಸೈಟು ಅಥವಾ ಮನೆ ಕೊಳ್ಳುವುದಕ್ಕೆ ಬೇಕಾಗಿರುತ್ತದೆ. ಮಾರುವವರು ಸಂಪರ್ಕಿಸಿರಿ
98809 33630

**ಮನೆ ಲೀಜ್‌ಗೆ ಇದೆ**
ದಾವಣಗೆರೆ ಪಿ.ಜೆ. ಬಡಾವಣೆ, ಪಿಸಾಳೆ ಕಾಂಪೌಂಡ್, 3ನೇ ಕ್ರಾಸ್, ಗ್ರೌಂಡ್ ಫ್ಲೋರ್, 2BHK ಮನೆ ಲೀಜ್‌ಗೆ ಇದೆ. ಸಂಪರ್ಕಿಸಿ
7022537033, 8884637808

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 1 BHK ಬಾಡಿಗೆಗೆ ಇದೆ. BIET College ಮುಖ್ಯರಸ್ತೆ, ಸಿದ್ದವೀರಪ್ಪ ಬಡಾವಣೆ, 9ನೇ ಕ್ರಾಸ್. ಸಂಪರ್ಕಿಸಿ :
99452 52229

**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳಿಸುತ್ತೇವೆ. ಬಾಣಂತಿ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಕಳುಹಿಸುತ್ತೇವೆ. ಸೆಕ್ಯೂರಿಟಿ ಸರ್ವೀಸ್. ಈ ಎಲ್ಲಾ ಸೇವೆಗಳು ಬೇಕಾಗಿದ್ದಲ್ಲಿ ಸಂಪರ್ಕಿಸಿ.
9902464522, 9686455820
ಯುವಕ-ಯುವತಿಯರು ಬೇಕಾಗಿದ್ದಾರೆ.

**ವಾಸ್ತು ಮನೆ ಬಾಡಿಗೆಗೆ**
ವಾಸ್ತುವಿನ ಪೂರ್ವ ಬಾಗಿಲಿನ ಗ್ರೌಂಡ್ ಫ್ಲೋರ್ 2 ಬೆಡ್‌ರೂಂ, ಡೈನಿಂಗ್ ರೂಂ, ಹಾಲ್, ನೀರಿನ ಸೌಕರ್ಯ ಪಾರ್ಕಿಂಗ್ ಮನೆ ಸಂಮೃದ್ಧಿ # 408 8 ನೇ ಮುಖ್ಯ, 8ನೇ ಅಡ್ಡ ರಸ್ತೆ ಪಿ.ಜೆ.ಬಡಾವಣೆ ಡಾ|| ನವೀನ್ ನಾಡಿಗ್ ಕ್ಲಿನಿಕ್ ಹತ್ತಿರ. ಸಂಪರ್ಕಿಸಿ
99168 62900, 93807 97651

**ಅರ್ಚಕರು ಬೇಕಾಗಿದ್ದಾರೆ**
ಗೊಲ್ಲರಹಳ್ಳಿ, ಅಣಜಿ, ಉಚ್ಚಂಗಿದುರ್ಗ ರಸ್ತೆಯಲ್ಲಿರುವ ದೇವಸ್ಥಾನಕ್ಕೆ ಪೂಜೆ ಮಾಡುವ ಪ್ರಧಾನ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ :
9148489139, 9900377718

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

# ಕೊರೊನಾ ಹೋರಾಟಕ್ಕೆ ವಾರ್ಡ್, ಬೂತ್ ಮಟ್ಟದ ಟಾಸ್ಕ್‌ಫೋರ್ಸ್

ಮಲೇಬೆನ್ನೂರು, ಜು.10- ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಸರ್ಕಾರದ ನಿರ್ದೇಶನದಂತೆ ಪಟ್ಟಣದಲ್ಲಿರುವ 23 ವಾರ್ಡ್‌ಗಳಲ್ಲಿ ಮತ್ತು 22 ಬೂತ್ ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಗಳನ್ನು ರಚಿಸಲಾಗಿದ್ದು, ಸಮಿತಿಗಳ ಜವಾಬ್ದಾರಿ ತಿಳಿಸುವುದಕ್ಕಾಗಿ ಇಲ್ಲಿನ ಶಾದಿಮಹಲ್‌ನಲ್ಲಿ ತರಬೇತಿ ಕಾರ್ಯಕ್ರಮವನ್ನು ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು.



ಮಲೇಬೆನ್ನೂರು

ಪುರಸಭೆ ಮುಖ್ಯಾಧಿಕಾರಿ ಹಾಗೂ ಪಟ್ಟಣದ ನೋಡಲ್ ಅಧಿಕಾರಿ ಧರಣೇಂದ್ರ ಕುಮಾರ್ ಮಾತನಾಡಿ, ವಾರ್ಡ್ ಟಾಸ್ಕ್ ಫೋರ್ಸ್ ಸಮಿತಿಯವರು ವಾರ್ಡಿನಲ್ಲಿ ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ನಿಮ್ಮ ವಾರ್ಡಿಗೆ ಬೇರೆ ದೇಶ, ರಾಜ್ಯ ಅಥವಾ ಅಂತರ್ ಜಿಲ್ಲೆಗಳಿಂದ ಬಂದಿರುವವರ ಬಗ್ಗೆ ಮಾಹಿತಿ ಪಡೆದುಕೊಂಡು ತಕ್ಷಣ ಕ್ವಾರಂಟೈನ್ ಮಾಡಿಸಿ, ನಂತರ ಆರೋಗ್ಯ ತಪಾಸಣೆ, ಕೊರೊನಾ ಟೆಸ್ಟ್ ಮಾಡಿಸಬೇಕು ಎಂದು ಕರೆ ನೀಡಿದರು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಹಾಗೂ ನೋಡಲ್ ಅಧಿಕಾರಿ ಡಾ. ಲಕ್ಷ್ಮಿದೇವಿ ಮಾತನಾಡಿ, ಬೂತ್‌ಮಟ್ಟದ ಸಮಿತಿಯು ಮನೆ ಮನೆ ಸರ್ವೇ ನಡೆಸಿ, ಜನರ ಆರೋಗ್ಯದ ಬಗ್ಗೆ ಮಾಹಿತಿ ಪಡೆದು, ಅದರಲ್ಲಿ ಶೀತ, ಜ್ವರ, ಕೆಮ್ಮು, ನೆಗಡಿಯಿಂದ ಬಳಲುತ್ತಿರುವವರನ್ನು ಗುರುತಿಸಿ, ತುರ್ತಾಗಿ ಆರೋಗ್ಯ ಕೇಂದ್ರಕ್ಕೆ ಕರೆ ತರಬೇಕೆಂದರು.

ಉಪತಹಶೀಲ್ದಾರ್ ಹಾಗೂ ನೋಡೆಲ್ ಅಧಿಕಾರಿ ಆರ್.ರವಿ ಮಾತನಾಡಿ, ವಾರ್ಡ್‌ಗಳಲ್ಲಿ ದಿನಂಪ್ರತಿ ಧ್ವನಿವರ್ಧಕದ ಮೂಲಕ ಕೊರೊನಾದ ಬಗ್ಗೆ ಅರಿವು ಮೂಡಿಸಬೇಕು, ವಾರ್ಡ್‌ಗಳಲ್ಲಿ 5 ಜನರಿಗಿಂತ ಹೆಚ್ಚು ಜನರು ಗುಂಪಾಗಿ ಸೇರದಂತೆ ನೋಡಿಕೊಳ್ಳಬೇಕು.

ಸಾಮಾಜಿಕ ಅಂತರ ಕನಿಷ್ಠ 1 ಮೀಟರ್ ಇರಬೇಕು. ವ್ಯಾಪಾರ ಸ್ಥಳ, ಧಾರ್ಮಿಕ ಕೇಂದ್ರ, ಎಟಿಎಂ ಬಳಿ ಬಣ್ಣದ ಬಾಕ್ಸ್ ಕಡ್ಡಾಯವಾಗಿರುವಂತೆ ನೋಡಿಕೊಳ್ಳಬೇಕೆಂದು ಸಂಪನ್ಮೂಲ ವ್ಯಕ್ತಿ ಹಾಗೂ ನೋಡಲ್ ಅಧಿಕಾರಿ ಉಮೇಶ್ ಹೇಳಿದರು.

ಈ ಸಮಿತಿಗಳು ಇದೇ ದಿನಾಂಕ 13 ರಿಂದ ಕಾರ್ಯ ಚಟುವಟಿಕೆ ಆರಂಭಿಸಲಿವೆ ಎಂದರು.

ಪಟ್ಟಣದ ಖಾಸಗಿ ವೈದ್ಯರಾದ ಡಾ. ಬಿ. ಚಂದ್ರಶೇಖರ್, ಡಾ|| ಶ್ರೀನಿವಾಸ್, ಡಾ|| ಪ್ರಕಾಶ್, ಡಾ|| ಸ್ವಾಮಿ ಅವರುಗಳು ಅಗತ್ಯ ಸಲಹೆ ನೀಡಿದರು.

ಎಎಸ್‌ಐ ಹನುಮಂತಪ್ಪ, ಪುರಸಭೆ ಸದಸ್ಯರಾದ ಎ.ಆರೀಫ್ ಅಲಿ, ಮಾಸಣಗಿ ಶೇಖರಪ್ಪ, ದಾದಾವಲಿ, ಭೋವಿಕುಮಾರ್, ಆದಾಪುರ ವಿಜಯಕುಮಾರ್, ಪ್ರಕಾಶ್‌ಚಾರ್, ಪಾಳೇಗಾರ್ ನಾಗರಾಜ್, ಪುರಸಭೆ ಅಧಿಕಾರಿಗಳಾದ ಗುರುಪ್ರಸಾದ್, ನವೀನ್, ದಿನಕರ್, ಗಣೇಶ್, ಪ್ರಭು ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

# ಕೊರೊನಾ ತಂದ ಆನ್‌ಲೈನ್‌ನ ಅತಂತ್ರ ಶಿಕ್ಷಣ !

**(1ನೇ ಪುಟದಿಂದ)** ತಂದೆ ಹದಿನೈದು ಸಾವಿರದ ಮೊಬೈಲ್ ಕೊಡಿಸಿದ್ದರು. ಆದರೆ, ಮೂರು ತಿಂಗಳಲ್ಲೇ ಮಗಳ ಕಣ್ಣಿಗೆ ಕನ್ನಡಕ, ತಲೆಗೆ ನೋವು ಬಂತು. ಇದು ಯಾಕೋ ಸರಿಯಾಗುತ್ತಿಲ್ಲ ಎಂದು ಸೆಕೆಂಡ್ ಹ್ಯಾಂಡ್ ಕಂಪ್ಯೂಟರ್‌ಗೆ ಹಣ ಸುರಿದಿದ್ದಾಯಿತು.

ಎಂಬಿಎ ವಿದ್ಯಾರ್ಥಿನಿ ಜಯಶ್ರೀಗೆ ಹೆಡ್‌ಫೋನ್ ಕಾರಣದಿಂದ ಕಿವಿ ನೋವಾದರೆ, ಬೋರಾಗುವ ಆನ್‌ಲೈನ್ ತರಗತಿಗಳಿಂದ ಎಂಟನೇ ತರಗತಿಯ ಸುಹಾಸ್‌ಗೆ ನಿದ್ರಾತುರ! ಕಿಸೆಯಲ್ಲಿ ಒಂದಿಷ್ಟು ದುಡ್ಡಿದ್ದವರಿಗೇ ಆನ್‌ಲೈನ್ ಈ ಸಮಸ್ಯೆಗಳನ್ನು ತರುತ್ತಿದೆ.

ಇನ್ನು ಡಾಟಾ ಕಾಣದ ಗ್ರಾಮಾಂತರ ಪ್ರದೇಶಗಳು, ಲಾಕ್‌ಡೌನ್ ಕಾರಣದಿಂದಾಗಿ ತಿಂಗಳುಗಳಿಂದ ಹಣವನ್ನೇ ಕಾಣದ ಪೋಷಕರ ಜೇಬುಗಳು ಆನ್‌ಲೈನ್ ಶಿಕ್ಷಣದ ಹೊರೆ ಭರಿಸಲು ಶಕ್ತವಾಗಿಲ್ಲ.

**ಪೋಷಕರೂ ಸಿದ್ಧರಾಗಬೇಕು :** ಆನ್‌ಲೈನ್ ಶಿಕ್ಷಣಕ್ಕೆ ಮಕ್ಕಳಷ್ಟೇ ಅಲ್ಲ ಪೋಷಕರೂ ಸಿದ್ಧರಾಗಬೇಕಿದೆ. ಮೊಬೈಲ್ ಮೂಲಕ ಮಕ್ಕಳಿಗೆ ಆನ್‌ಲೈನ್ ತರಗತಿ ತೋರಿಸಲು ಹೋದರೆ ಮಕ್ಕಳ ಕಣ್ಣು ಬಳಲುತ್ತವೆ. ಒಂದು ಟ್ಯಾಬ್, ಲ್ಯಾಪ್‌ಟಾಪ್ ಇಲ್ಲವೇ ಕಂಪ್ಯೂಟರ್ ಆನ್‌ಲೈನ್ ತರಗತಿಗಳಿಗೆ ಉತ್ತಮ.

ಮಕ್ಕಳಿಗೆ ಆನ್‌ಲೈನ್ ತರಗತಿಯ ಅಗತ್ಯದ ಬಗ್ಗೆ ತಿಳಿಹೇಳುವ ಜೊತೆಗೆ ಆರೋಗ್ಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ಗ್ಯಾಡ್ಜೆಟ್ ಬಳಕೆ ತಿಳಿಸುವುದರಲ್ಲಿ ಪೋಷಕರ ಹೊಣೆಯೇ ಹೆಚ್ಚಾಗಿದೆ.

**ಮಕ್ಕಳನ್ನು ಅರಿಯಿರಿ :** ನೇರ ಶಿಕ್ಷಣದಲ್ಲಿ ಮಕ್ಕಳು ಶಿಕ್ಷಕರ ಎದುರೇ ಇರುತ್ತಾರೆ. ಒಂದು ವೇಳೆ ಅವರು ಪಾಠ ಆಲಿಸಲು ಆಸಕ್ತಿ ತೋರದೇ ಇದ್ದರೆ ಶಿಕ್ಷಕರು ತಿದ್ದಿ ಬುದ್ದಿ ಹೇಳುತ್ತಾರೆ. ಆನ್‌ಲೈನ್‌ನಲ್ಲಿ ಅದಕ್ಕೆ ಅವಕಾಶವಿರಲ್ಲ. ಮಕ್ಕಳು ಯಾವ ರೀತಿ ಆನ್‌ಲೈನ್‌ನಲ್ಲಿ ಕಲಿಯಲು ಬಯಸುತ್ತಾರೆ ಎಂಬುದು ಬಹಳ ಮುಖ್ಯವಾಗಿದೆ.

ಮಕ್ಕಳಿಗೆ ಆಸಕ್ತಿ ಬರುವ ರೀತಿಯಲ್ಲಿ ಪಾಠಗಳ ಬೋಧನೆ ಇರಬೇಕಾದರೆ, ಅವರ ಅಭಿಪ್ರಾಯಗಳನ್ನು ನಿರಂತರವಾಗಿ ಕೇಳುತ್ತಿರಬೇಕು. ಅದರಂತೆ ಆನ್‌ಲೈನ್ ಶಿಕ್ಷಣದಲ್ಲಿ ಬದಲಾವಣೆ ತರಲೇಬೇಕು. ಇಲ್ಲವಾದರೆ ಮೊಬೈಲ್ ಮೇಲೆ ಡಾಟಾ ಸುರಿದಂತೆ ಎಲ್ಲವೂ ವ್ಯರ್ಥವಾಗುತ್ತದೆ.

**ಬೋರೋ ಬೋರು :** ಝೂಮ್, ಗೂಗಲ್ ಮೀಟ್ ಇತ್ಯಾದಿ ಆಪ್‌ಗಳ ಮೂಲಕ ಕೆಲವರು ಪಾಠ ಮಾಡುತ್ತಿದ್ದಾರೆ. ಆದರೆ, ಅದು ಮಕ್ಕಳಿಗೆ ಬೋರಾಗುತ್ತಿದೆ ಎಂಬ ದೂರು ಹಲವು ಪೋಷಕರದ್ದು. ಏಕೆಂದರೆ ಮೇಷ್ಟ್ರುಗಳು ನೇರ ಪಾಠಕ್ಕೆ ಪರಿಣಿತರೇ ವಿನಃ ಆನ್‌ಲೈನ್ ಪಾಠಕ್ಕಲ್ಲ!

ಶಿಕ್ಷಣದ ಹಲವಾರು ಆಪ್‌ಗಳು ಹಾಗೂ ಯೂಟ್ಯೂಬ್‌ನ ಪಾಠಗಳು ರಂಗು ರಂಗಾಗಿ ವಿದ್ಯಾರ್ಥಿಗಳನ್ನು ಸೆಳೆಯುವಂತಿರುತ್ತವೆ. ಅಲ್ಲಿ ವಿಡಿಯೋ ರೂಪಿಸುವವರ ಹಾವ ಭಾವಗಳು ಆನ್‌ಲೈನ್ ಶಿಕ್ಷಣಕ್ಕೆ ಒಗ್ಗಿರುತ್ತವೆ.

ಆದರೆ, ನಮ್ಮ ಕೆಲ ಬಡಪಾಯಿ ಶಿಕ್ಷಕರು ಆನ್‌ಲೈನ್ ಶಿಕ್ಷಣದಲ್ಲೂ ಕೋಲು ಹಿಡಿದು ಕರಿ ಬೋರ್ಡ್ ಮೇಲೆ ಪಾಠ ಬರೆದು ಮೊಬೈಲ್ ಮೂಲಕ ಮಕ್ಕಳಿಗೆ ಕಳಿಸುತ್ತಿದ್ದಾರೆ. ಇದು ನಿಜಕ್ಕೂ ಮಕ್ಕಳಿಗೆ ಬೋರೋ ಬೋರು.

## ನೀರು ಕಾಣದ ತೋಟ

**(1ನೇ ಪುಟದಿಂದ)** ಹಕ್ಕು ಎಂದು ರಾಜ್ಯ ಹೈಕೋರ್ಟ್ ಹೇಳಿದೆ. ಅದೇ ರೀತಿ ಸಮಾನತೆಯೂ ಹಕ್ಕಾಗಿದೆ. ಒಬ್ಬರಿಗೆ ಆನ್‌ಲೈನ್ ಶಿಕ್ಷಣ ಸಿಗುವಾಗ ಇನ್ನೊಬ್ಬರನ್ನು ವಂಚಿತರನ್ನಾಗಿ ಮಾಡಬಾರದು. ಹೀಗಾಗಿ ಶಿಕ್ಷಣ ರಹಿತ ವರ್ಷದ ಬದಲು ಲಭ್ಯವಿರುವ ತಂತ್ರಜ್ಞಾನ ಹಾಗೂ ಮಾನವ ಸಂಪನ್ಮೂಲ ಬಳಸಿ ಸೂಕ್ತ ಶಿಕ್ಷಣದ ವ್ಯವಸ್ಥೆ ಮಾಡಬೇಕಿದೆ.

ಚಂದನ ವಾಹಿನಿಯು ಈಗಾಗಲೇ 8ರಿಂದ 10ನೇ ತರಗತಿಯವರೆಗೆ ಟಿವಿ ಪಾಠ ಆರಂಭಿಸಿದೆ. ಇದೇ ರೀತಿ ಬಡವರು ಹಾಗೂ ಗ್ರಾಮೀಣ ಮಕ್ಕಳಿಗೆ ಸಾಧ್ಯವಿರುವ ಹಲವಾರು ಕ್ರಮಗಳಿಗೆ ಸರ್ಕಾರ ಮುಂದಾಗಬೇಕಿದೆ ಎಂದು ಹಲವಾರು ಶಿಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

**ಬದಲಾವಣೆ ಬೇಕು :** ಇವೆಲ್ಲ ಸಮಸ್ಯೆ ನೀಗಬೇಕಾದರೆ ಆನ್‌ಲೈನ್ ಶಿಕ್ಷಣದ ಮಿತಿಯನ್ನು ಅರಿತುಕೊಳ್ಳಲೇಬೇಕು. ಆನ್‌ಲೈನ್ ತಾತ್ಕಾಲಿಕ ಹಾಗೂ ಸೀಮಿತ. ಇದಕ್ಕೆ ಪೂರಕವಾಗಿ ನೇರ ಶಿಕ್ಷಣ ಬೇಕೇ ಬೇಕು. ಆನ್‌ಲೈನ್ ಹಾಗೂ ಸಾಮಾಜಿಕ ಅಂತರದ ನೇರ ಶಿಕ್ಷಣಗಳನ್ನು ರೂಪಿಸುವ ಬಗ್ಗೆ ಪರಿಣಿತರು ಮುಂದಾಗಬೇಕಿದೆ. ಇಲ್ಲವಾದರೆ ಅತ್ತ ಆನ್‌ಲೈನ್‌ಗೂ ಹಣ ಹಾಕಿ, ಇತ್ತ ನೇರ ಶಿಕ್ಷಣಕ್ಕೂ ಹಣ ಹಾಕಿ ಕೊನೆಗೆ ಎರಡೂ ಇಲ್ಲದೇ ಎಡಬಿಡಂಗಿತನಕ್ಕೆ ಹೋದಂತಾಗುತ್ತದೆ.

# ಸಿಎಂ ಆಪ್ತ ಸಿಬ್ಬಂದಿಗೆ ಕೊರೊನಾ

**(1ನೇ ಪುಟದಿಂದ)** ಕಾರ್ಯಕ್ರಮಗಳನ್ನು ರದ್ದು ಮಾಡಿದ ಮುಖ್ಯಮಂತ್ರಿಯವರು, ಕಾವೇರಿ ನಿವಾಸದಿಂದಲೇ ಕಾರ್ಯನಿರ್ವಹಿಸಿದರು.

ವಿಧಾನಪರಿಷತ್ತಿನ ಸದಸ್ಯತ್ವದಿಂದ ನಿವೃತ್ತಿಗೊಂಡ 16 ಜನರಿಗೆ ವಿಧಾನಸೌಧದಲ್ಲಿ ಏರ್ಪಡಿಸಿದ್ದ, ಬೀಳ್ಕೊಡಿಗೆ ಸಮಾರಂಭದಿಂದಲೂ ದೂರ ಉಳಿದರು. ಈಗಾಗಲೇ ಅವರ ಸಂಪುಟದ ಐವರು ಸಚಿವರು ಕೊರೋನಾ ಭೀತಿಯಿಂದ ಕ್ವಾರಂಟೈನ್‌ಗೆ ಒಳಗಾಗಿದ್ದರು. ಅದರಲ್ಲೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಸುಧಾಕರ್ ಎರಡು ಬಾರಿ ಕ್ವಾರಂಟೈನ್‌ಗೆ ಒಳಪಟ್ಟರು.

ಮುಖ್ಯಮಂತ್ರಿಯವರ ಕೃಷ್ಣಾ ಕಚೇರಿಯ ಅಡುಗೆ ಸಿಬ್ಬಂದಿಗೆ ಕೊರೊನಾ ತಗುಲಿದೆ. ಇದಲ್ಲದೆ ಅವರ ಆಪ್ತ ಸಹಾಯಕ, ತಮ್ಮ ಕಾರಿನ ಇಬ್ಬರು ಚಾಲಕರಿಗೆ, ಕಚೇರಿಯ ಎಲೆಕ್ಟ್ರೀಷಿಯನ್‌ಗೂ ಸೋಂಕು ತಗಲಿದೆ.

# ಜು. 30, 31ರಂದು ಸಿಇಟಿ ಪರೀಕ್ಷೆ

**(1ನೇ ಪುಟದಿಂದ)** ಆಗಸ್ಟ್ 8 ಮತ್ತು 9 ನಡೆಯಲಿದೆ. ಆಗಸ್ಟ್ 9 ರಂದು ಡಿಪ್ಲೋಮಾ ಸಿಇಟಿ ನಡೆಯಲಿದೆ ಎಂದರು.

ಕೆ-ಸೆಟ್ ಪರೀಕ್ಷೆಗಳ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ ಎಂದು ಅವರು ಹೇಳಿದರು. ಪರೀಕ್ಷೆ ತಡ ಮಾಡಿದರೆ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲ ಮುನ್ನೆಚ್ಚರಿಕೆಗಳನ್ನು ವಹಿಸಿ ಪರೀಕ್ಷೆ ನಡೆಸಲಾಗುವುದು. ಸಮರ್ಪಕ ಸ್ಯಾನಿಟೈಸೇಷನ್ ಮತ್ತು ಸಾಮಾಜಿಕ ಅಂತರಕ್ಕೆ ಧಕ್ಕೆ ಆಗದ ಹಾಗೆ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ ಎಂದೂ ಅವರು ಹೇಳಿದ್ದಾರೆ.

# ಶಾಲಾ ಕಚೇರಿಗಳಿಗೆ ಶನಿವಾರದ ರಜೆ

**(1ನೇ ಪುಟದಿಂದ)** ಶನಿವಾರ ಮತ್ತು ನಾಲ್ಕನೇ ಶನಿವಾರಗಳನ್ನು ಸೇರಿಸಿಕೊಂಡಂತೆ 2020ರ ಜುಲೈನ ಎಲ್ಲಾ ಶನಿವಾರಗಳಂದು ರಜೆ ಇರಲಿದೆ ಎಂದು ತಿಳಿಸಲಾಗಿದೆ. ಆದರೆ, ಈ ರಜೆಯು ಕೊರೊನಾ ಕಾರ್ಯಕ್ಕೆ ನಿಯುಕ್ತರಾಗಿರುವ ಶಿಕ್ಷಕರು, ಅಧಿಕಾರಿ, ಸಿಬ್ಬಂದಿಯವರಿಗೆ ಹಾಗೂ ಎಸ್ಸೆಸ್ಸೆಲ್ಸಿ ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿತರಾಗಿರುವ ಶಿಕ್ಷಕರು ಅಧಿಕಾರಿ ಸಿಬ್ಬಂದಿಯವರಿಗೆ ಅನ್ವಯವಾಗುವುದಿಲ್ಲವೆಂದು ತಿಳಿಸಲಾಗಿದೆ.

**ರಿಜಿಸ್ಟ್ರೇಷನ್‌ಗಳಿಗಾಗಿ ಸಂಪರ್ಕಿಸಿ**
ನಾವುಗಳು ನಿಧಿ ಬ್ಯಾಂಕ್, ನಿಧಿ ಕಂಪನಿ, ಕಂಪನಿಗಳು , FSSI, Annual Compliance ಇನ್ನೂ ಎಲ್ಲಾ ತರಹದ ರಿಜಿಸ್ಟ್ರೇಷನ್‌ಗಳು, ಕಂಪನಿಗಳ ಲೆಕ್ಕ ಪರಿಶೋಧನೆ ಮಾಡಿಕೊಡುತ್ತೇವೆ.
ಸಂಪರ್ಕಿಸಿ : 63619 35009

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ. (ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮಳಿಗೆ ಬಾಡಿಗೆಗೆ ಇದೆ**
1300 Sqft ಎ.ವಿ.ಕೆ ರಸ್ತೆ ಸ್ಟೇಡಿಯಂ ಹತ್ತಿರ
83173 98303
97430 96695

**ಮಳಿಗೆ ಬಾಡಿಗೆಗೆ**
ಶಕ್ತಿ ನಗರದಲ್ಲಿ ವ್ಯಾಪಾರಕ್ಕೆ ಅಥವಾ ಗೋಡೌನ್‌ಗಳಿಗೆ ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ. ಸಂಪರ್ಕಿಸಿ :
ಮೊ. 94484 39639

**ಮನೆ ಬಾಡಿಗೆಗೆ ಇದೆ**
MCC A Block, 2nd Main, 2nd Cross, I BHK, 2nd Floor, Fully Furnished
PRAKASH R.
80734 70383

**ಮನೆಗಳು ಬಾಡಿಗೆಗೆ / ಭೋಗ್ಯಕ್ಕಿವೆ**
ಎರಡನೇ ಮಹಡಿಯಲ್ಲಿ ಸಿಂಗಲ್ BHK ಎರಡು ಮನೆಗಳು ಬಾಡಿಗೆಗಿವೆ ಹಾಗೂ ಬೋರ್- ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆಗಳು, ನಂ. 651, ಶ್ರೀ ಕಟೀಲು, 6ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ.
70194 27951, 9341014488

**ಸೈಟು ಮಾರಾಟಕ್ಕಿದೆ**
31×54, ಪೂರ್ವ-ದಕ್ಷಿಣ ಕಾರ್ನರ್ Commercial, 40 Feet Road, ಉತ್ತಮ ಚಂದ್ ಬಡಾವಣೆ, Relaince Petrol Bunk ಹಿಂಭಾಗ, ಆವರಗೆರೆ, ದಾವಣಗೆರೆ.
ಮೊ. 83107 72277

**ಸೈಟುಗಳು ಮಾರಾಟಕ್ಕೆ ಇವೆ ಅಪಾರ್ಟ್‌ಮೆಂಟ್ ಮಾರಾಟಕ್ಕೆ ಇದೆ**
ಹೈಟೆಕ್ ಲೇ ಔಟ್, ಮಹಾಲಕ್ಷ್ಮಿ ಲೇ ಔಟ್, ವಿನಾಯಕ ಬಡಾವಣೆ, ಬನಶಂಕರಿ ಬಡಾವಣೆ, ಸಿದ್ದವೀರಪ್ಪ ಬಡಾವಣೆ, 30×40, 35×56, 30×50, 40×60, 30×80
94481 85946

**WANTED**
Girls Required for data Entry/ billing & boys Required for Supervisor work at food mart Supermarket (Experience candidate will have preference) Qualifiaction : PUC/Any Degree
Mob : 98864 63531

**HOUSE FOR RENT**
North Facing 2 BHK house with 24 hours Borewell and muncipal Water and parking facility available at 11th Main, SS Layout, A Block, Opp: Indoor Stadium.
Ahmed, 94489 48129
ಮಧ್ಯವರ್ತಿಗಳಿಗೆ ಅವಕಾಶವಿದೆ.

**ದಾವಣಗೆರೆ ನಗರದಲ್ಲಿ ಸಿಬಿಎಸ್‌ಸಿ ಹಾಗೂ ಸ್ಟೇಟ್ ಪಠ್ಯದ ವಿದ್ಯಾರ್ಥಿಗಳಿಗೆ ಮನೆಪಾಠ ಹೇಳಿಕೊಡಲಾಗುವುದು**
1. ಕೊರೊನಾದಿಂದ ಮಕ್ಕಳು ವಿದ್ಯಾಭ್ಯಾಸದಲ್ಲಿ ಹಿಂದೆ ಬೀಳುವರೆಂಬ ಭಯವೇ?
2. ಆನ್‌ಲೈನ್ ಕ್ಲಾಸ್ ಇದ್ದರೂ ಓದಿಸೋದು ಕಷ್ಟವಾಗುತ್ತಿದೆಯೇ?
3. ಈ ಸಮಯದಲ್ಲಿ ಶಿಕ್ಷಕರೇ ಸುರಕ್ಷಿತವಾಗಿ ಮನೆಯಲ್ಲಿ ಪಾಠ ಮಾಡುವುದನ್ನು ಇಷ್ಟಪಡುವಿರಾ?
4. ಮಗುವಿನ ಮನಸ್ಸನ್ನು ಅರಿತ ನುರಿತ ಶಿಕ್ಷಕರು ಮನೆಗೆ ಬಂದು ಪಾಠ ಮಾಡಿದರೆ ಹೇಗೆ ಎಂದು ಯೋಚಿಸುತ್ತಿದ್ದೀರಾ?
5. ಮಾಸ್ಕ್ ಅಂಡ್ ಸ್ಯಾನಿಟೈಸರ್ ಹಿಡಿದು ಸುರಕ್ಷಿತವಾಗಿ ಪಾಠ ಹೇಳಿಕೊಡುವ ಶಿಕ್ಷಕರು ಬೇಕೆ?
6. ಮಗುವಿನ ವಿದ್ಯಾಭ್ಯಾಸ ಹಾಗೂ ಸುರಕ್ಷತೆ ಎರಡನ್ನೂ ಮನಸ್ಸಿನಲ್ಲಿಟ್ಟುಕೊಂಡು ಮನೆ ಪಾಠ ಮಾಡುವ ಶಿಕ್ಷಕರು ಬೇಕೆ? ಹಾಗಿದ್ದಲ್ಲಿ ತಡವೇಕೆ? ಈ ನಂಬರ್‌ಗೆ
+91 82771 55793 ಈಗಲೇ ಒಂದು ಮಿಸ್‌ಕಾಲ್ ಕೊಡಿ.

**ಮನೆ ಬಾಡಿಗೆಗೆ**
ಸ್ವಾಮಿ ವಿವೇಕಾನಂದ ಬಡಾವಣೆ, 1ನೇ ಮೇನ್, 5ನೇ ಕ್ರಾಸ್, ಶ್ರೀಮತಿ ಪುಷ್ಪಾ ಮಹಾಲಿಂಗಪ್ಪ ಸ್ಕೂಲ್ ಮೇನ್ ಗೇಟ್ ಎದುರು, ಪೂರ್ವ ದಿಕ್ಕಿನ 2BHK, ಕಾರ್ಪೊರೇಷನ್, ಬೋರ್‌ವೆಲ್ ನೀರಿನ ವ್ಯವಸ್ಥೆ ಇರುವ ಕೆಳಗಿನ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ :
ಮೊ. 99028 49718

**ಬೇಕಾಗಿದ್ದಾರೆ**
ಲೇಡಿ ಟೆಲಿಕಾಲರ್ಸ್ ಹಾಗೂ ಹೆಲ್ಪರ್ ಹುಡುಗರು ಬೇಕಾಗಿದ್ದಾರೆ. ಅವಿವಾಹಿತರು ಮಾತ್ರ. 6000 ರೂ. ವೇತನ
7259573740, 8548047353

**RENT AVAILABLE**
Ground Floor (East Facing) Spacious hall 20x50 sqft near Ram and co circle Davangere
94485 67522

**ಟ್ಯಾಲಿ ಆಪರೇಟರ್ ಬೇಕಾಗಿದ್ದಾರೆ**
5 ವರ್ಷ ಅನುಭವವುಳ್ಳವರು ಸಂಪರ್ಕಿಸಿ
ದ್ವಾರಕ ಟ್ರೇಡರ್ಸ್
ಬಿ.ಟಿ ಗಲ್ಲಿ ಹತ್ತಿರ, ಎಂ.ಜಿ ರಸ್ತೆ, ದಾವಣಗೆರೆ
94484 56359

**ಜಮೀನು ಮಾರಾಟಕ್ಕಿದೆ**
ದಾವಣಗೆರೆಗೆ 20 km ದೂರದ ಹದಡಿ ರೋಡ್, ತಿಮ್ಮಪ್ಪ ಕ್ಯಾಂಪ್‌ನಲ್ಲಿ 3 ಎಕರೆ 20 ಗುಂಟೆ, ಪಂಪ್‌ಸೆಟ್ ಹಾಗೂ ಚಾನಲ್ ನೀರಿನ ನೀರಾವರಿ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
94832 09207

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

|| ಶ್ರೀ ಹೊಂಬಾಳಮ್ಮ ದೇವಿ ಪ್ರಸನ್ನ || || ಶ್ರೀ ವೆಂಕಟೇಶ್ವರ ಸ್ವಾಮಿ ಪ್ರಸನ್ನ ||
**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ, ನಿಟುವಳ್ಳಿ ಮೇನ್ ರೋಡ್, ಕಿರೋಡಿ ಮಿಲ್ ಮುಂಭಾಗ, ಎಂ. ಹಾಲಸ್ವಾಮಿ ನಿಲಯದ ವಾಸಿ
ಟಿ.ಕೆ. ಶ್ರೀನಿವಾಸ್ ಹಾಗೂ ಟಿ.ಕೆ. ಶ್ರೀಕಾಂತ್
ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 30.06.2020ನೇ ಮಂಗಳವಾರ ರಾತ್ರಿ 8.40ಕ್ಕೆ ನಮ್ಮ ತಂದೆಯವರಾದ
**ಶ್ರೀ ಟಿ.ಹೆಚ್. ಕೃಷ್ಣಮೂರ್ತಿ**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಸಮಾರಾಧನೆ'ಯನ್ನು ದಿನಾಂಕ : 12.07.2020ನೇ ಭಾನುವಾರ ಮಧ್ಯಾಹ್ನ 1.30ಕ್ಕೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಶಂಕ್ರಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
86186 83828, 99720 03973
ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

**ಕೊಮಾರನಹಳ್ಳಿ ಗ್ರಾಮದ ಮಾಯಮ್ಮ ನಿಧನ**



ಹರಿಹರ ತಾಲ್ಲೂಕು ಕೊಮಾರನಹಳ್ಳಿ ಗ್ರಾಮದ ದಿ|| ಗುಡಿಯಪ್ಪರ ಸಣ್ಣ ಹಾಲಪ್ಪನವರ ಧರ್ಮಪತ್ನಿ ಶ್ರೀಮತಿ ಮಾಯಮ್ಮ (95) ಅವರು ದಿನಾಂಕ 10.07.2020ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ನಿಧನರಾದರು. ಮೂವರು ಪುತ್ರರು, ಐವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.07.2020ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಕೊಮಾರನಹಳ್ಳಿಯಲ್ಲಿ ನೆರವೇರಲಿದೆ.

**ಬಿ. ಅಬ್ದುಲ್ ಕರೀಂ ಸಾಬ್ ನಿಧನ**



ದಾವಣಗೆರೆ ಕೆಟಿಜೆ ನಗರ, 3ನೇ ಮೇನ್, 9ನೇ ಕ್ರಾಸ್, ವಿದ್ಯಾರ್ಥಿ ಭವನ ಹಿಂಭಾಗದ ವಾಸಿ, ಬಿ. ಅಬ್ದುಲ್ ಕರೀಂ ಸಾಬ್ (75) ಅವರು ದಿನಾಂಕ 10.07.2020ರ ಶುಕ್ರವಾರ ಸಂಜೆ 5 ಗಂಟೆಗೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.07.2020ರ ಶನಿವಾರ ಬೆಳಿಗ್ಗೆ 10.30ಕ್ಕೆ ನಗರದ ಪಿ.ಬಿ. ರಸ್ತೆಯ ಹಳೇ ಖಬರಸ್ತಾನದಲ್ಲಿ ನೆರವೇಲಿದೆ.

**ನರ್ಸಿಂಗ್ ಸೇವೆಗಳು HOME NURSING**
ಮನೆಯಲ್ಲಿರುವ ರೋಗಿಗಳು ಹಾಗೂ ವೃದ್ಧರ ಆರೈಕೆಗಾಗಿ, BP, SUGAR, DRESSING, NEBULIZATION, ಸಂಪರ್ಕಿಸಿ
90711 06106

**ಮಯೂರ್ ಕನ್ಸಲ್ಟೆನ್ಸಿ ಸರ್ವಿಸ್**
- ಬಿಲ್ಡಿಂಗ್ ಪ್ಲಾನ್, ಕನ್‌ಸ್ಟ್ರಕ್ಷನ್ಸ್
- ಎಸ್ಟಿಮೇಟ್
- ಅಪ್ರೂವಲ್ ಡ್ರಾಯಿಂಗ್ಸ್
- ಪ್ರಾಪರ್ಟಿ ವ್ಯಾಲ್ಯೂವರ್
- 3ಡಿ ಎಲೆವೇಷನ್ಸ್
- ಸಿಂಪಲ್ ವಾಸ್ತು
ER. ಮಯೂರ್ H.N
B.E (Civil), MBA, M.Tech, MIE
98444 88838

**ಆಂಧ್ರ ಉಪ್ಪಿನ ಕಾಯಿ ದೊರೆಯುತ್ತದೆ**
63611 50414
96862 57899

**ಬೇಕಾಗಿದ್ದಾರೆ**
ದಾವಣಗೆರೆ ಕನ್ನಡಿಗ ದಿನಪತ್ರಿಕೆ ಕಚೇರಿಯಲ್ಲಿ ಕೆಲಸ ಮಾಡಲು ಮಹಿಳಾ ಸಹಾಯಕರು ಬೇಕಾಗಿದ್ದಾರೆ. ಬೇಸಿಕ್ ಕಂಪ್ಯೂಟರ್ ಜ್ಞಾನವಿದ್ದವರಿಗೆ ಆದ್ಯತೆ. ವಿಳಾಸ : ಮಳಿಗೆ ಸಂಖ್ಯೆ-8, ಸೂಪರ್ ಮಾರ್ಕೆಟ್ ಕಾಂಪ್ಲೆಕ್ಸ್, ಚರ್ಚ್ ರಸ್ತೆ, ಎಂ.ಸಿ.ಸಿ.'ಎ' ಬ್ಲಾಕ್, ದಾವಣಗೆರೆ:
ಮೊ. 86608 86694

**ಸಾಲಗಳಿಗಾಗಿ ಸಂಪರ್ಕಿಸಿ**
ವಾರ್ಷಿಕ 8% ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ, ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ, ವ್ಯವಸಾಯ, ವ್ಯವಹಾರ, ಪರ್ಸನಲ್ ಲೋನ್, ಬಂಗಾರ ಸಾಲಗಳು, 60 ಪೈಸೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳಿಗೆ ಸಂಪರ್ಕಿಸಿ :
73385 80345

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟ, ಪಪ್ಪಾಯಿ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ರಕ್ತಚಂದನ, ಗುಲಾಬಿ ಹಾಗೂ ಇತರ ಸಸಿಗಳು ದೊರೆಯುತ್ತವೆ ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ವಿಳಾಸ: ಸುಬ್ರಮಣ್ಯ ಅಗ್ರೋ ಟೆಕ್ ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
ಮೊ: 94484 39639
63665 96479

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಬೇಕಾದ ವಿಳಾಸ
ಸಾಕೇತ್ ಎಂಟರ್‌ಪ್ರೈಸಸ್
ಪ್ಲಾಟ್ ನಂ. 5-E, ಕರೂರು ಇಂಡಸ್ಟ್ರೀಯಲ್ ಏರಿಯಾ, ಡಿ.ಐ.ಸಿ. ಆಫೀಸ್ ಎದುರು, ದಾವಣಗೆರೆ.
ದೂರವಾಣಿ : 87629 02569

**ಕಮರ್ಷಿಯಲ್ ಕಾರ್ನರ್ ಮಳಿಗೆ ಬಾಡಿಗೆಗೆ ಇದೆ**
ಎಂ.ಸಿ.ಸಿ. 'ಬಿ' ಬ್ಲಾಕ್, ಮಾಮಾಸ್ ಜಾಯಿಂಟ್ ರಸ್ತೆಯಲ್ಲಿ 25×19 ಸೈಜಿನ ಕಾರ್ನರ್ ಮಳಿಗೆ ಬಾಡಿಗೆಗೆ ಇದೆ. ವಿಚಾರಿಸಿ :
99643 37711


**ಉದ್ಯೋಗಕ್ಕಾಗಿ ಶಿಕ್ಷಣ**
ಡಿಪ್ಲೋಮಾ ಪೇಷೆಂಟ್‌ಕೇರ್ ನರ್ಸಿಂಗ್, NTC : ನರ್ಸರಿ ಟೀಚರ್ಸ್ ಟ್ರೈನಿಂಗ್, PUC : Arts./Comm..Sci.
ಮಾನಸ ಗಂಗೋತ್ರಿ ವಿದ್ಯಾಸಂಸ್ಥೆ
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
86602 35013

**ಕರುಣಾ ಜೀವ ಕಲ್ಯಾಣ ಟ್ರಸ್ಟ್ (ರಿ.)**
3 ವರ್ಷದ Second Hand Ape-Auto (ಲಗೇಜ್ ಆಟೋ) ಖರೀದಿಗೆ ಬೇಕಾಗಿದೆ.
ಸಂಪರ್ಕಿಸಿ : ಲಿಂಗರಾಜು
ಮೊ.95380 24422

**House For Rent Long Term & Short Term Available**
with all Amenities cot, bed, fan, light, UPS internet, T.V Dining table, Geyser, Kitchen, Stove, Gas etc.
94800 73451

**ಬೇಕಾಗಿದ್ದಾರೆ**
ದಾವಣಗೆರೆ ಸುತ್ತ ಮುತ್ತ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಊಟ ಹಾಗೂ ವಸತಿ, ESI, PF ಸೌಲಭ್ಯ ಇರುತ್ತದೆ.
96113 94063
97421 71342

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 9.7.2020ರ ಗುರುವಾರದಂದು ನಿಧನರಾದ ಮಾಜಿ ಶಾಸಕ ದಿ|| ಪಂಪಾಪತಿ ಅವರ ಸಹೋದರರೂ, ಲೋಕಿಕೆರೆ ರಸ್ತೆಯ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ ಸೇವಾ ಸಮಿತಿಯ ಖಜಾಂಚಿಗಳೂ ಆದ
**ಶ್ರೀ ಎಂ. ಪಾಂಡುರಂಗನ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಮೃತರ ಕುಟುಂಬ ವರ್ಗದವರಿಗೆ ದುಃಖ ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
✦ ಅಧ್ಯಕ್ಷರು : ಪಿ. ಮುರುಗನ್, ✦ ಉಪಾಧ್ಯಕ್ಷರು : ಶ್ರೀಮತಿ ಶಶಿಕಲಾ ಇ.ಆರ್.
✦ ಕಾರ್ಯದರ್ಶಿ : ಕೆ. ನಟರಾಜ್ ಹಾಗೂ ಟ್ರಸ್ಟ್‌ನ ಸರ್ವ ಸದಸ್ಯರು
ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ ಸೇವಾ ಸಮಿತಿ, ಲೋಕಿಕೆರೆ ರಸ್ತೆ, ದಾವಣಗೆರೆ.

**ಆರಾಧನಾ ದಿನಾಂಕ ಬದಲಾವಣೆ**



ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ವಾಸಿ, ಶ್ರೀಮತಿ ಎಸ್. ಲೀಲಾವತಿ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 08.07.2020ನೇ ಬುಧವಾರ ಬೆಳಿಗ್ಗೆ 4 ಗಂಟೆಗೆ ನನ್ನ ಪತಿಯವರಾದ
**ಶ್ರೀ ಬಿ. ಗಿರಿರಾಜ**
ಇವರು ನಿಧನರಾದ ಪ್ರಯುಕ್ತ 'ಆರಾಧನೆ'ಯನ್ನು ದಿನಾಂಕ 12.07.2020ನೇ ಭಾನುವಾರದಂದು ನಡೆಸಲು ನಿಶ್ಚಯಿಸಿದ್ದು, ಕಾರಣಾಂತರದಿಂದ ದಿನಾಂಕ 16.07.2020ರ ಗುರುವಾರ ಬೆಳಿಗ್ಗೆ 11 ಗಂಟೆಗೆ ದೊಡ್ಡಬಾತಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು.
ತಾವುಗಳು ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 09.07.2020ರಂದು ನಿಧನರಾದ ಜ್ಯೋತಿ ಗ್ಯಾಸ್ ಮಾಲೀಕರಾದ ಶ್ರೀ ಅಂದನೂರು ಬಸವರಾಜ್ ಅವರ ಧರ್ಮಪತ್ನಿ
**ಶ್ರೀಮತಿ ಅಂದನೂರು ಲೀಲ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಸಿಬ್ಬಂದಿ ವರ್ಗ
**ಜ್ಯೋತಿ ಗ್ಯಾಸ್ ಏಜೆನ್ಸಿ**
ಅಶೋಕ ರಸ್ತೆ, ದಾವಣಗೆರೆ.

**WANTED**
Marketing Executives Required for Education institute Qualification: MBA or Relevant. Freshers also can Apply. Contact :
86181 29962, 89703 19829

**ಹೆಸರು ದೃಢೀಕರಣ**
ದಾವಣಗೆರೆ ಸಿಟಿ ಡೋ.ನಂ. 2674/950, 3ನೇ ಕ್ರಾಸ್, ಶಿವನಗರ, ಸರ್ಕಾರಿ ಶಾಲೆ ಹತ್ತಿರದ ನಿವಾಸಿಯಾದ ಮಹ್ಮದ್ ಹಯಾತ್ ಬಿನ್ ಚಮನ್ ಸಾಬ್ ಆದ ನಾನು ನನ್ನ ಚುನಾವಣಾ ಗುರುತಿನ ಕಾರ್ಡ್‌ನಲ್ಲಿ ಮಹ್ಮದ್ ಹಯಾತ್ ಎಂದಾಗಿದ್ದು, ಶಾಲಾ ವರ್ಗಾವಣೆ ಪತ್ರದಲ್ಲಿ ಹಯಾತ್ ಸಾಬ್ ಎಂದು ನಮೂದಾಗಿದೆ. ಈ ಮೇಲಿನ ಎರಡೂ ಹೆಸರುಗಳೂ ನನ್ನದೇ ಆಗಿದ್ದು, ದಿನಾಂಕ 8.1.2020ರಂದು ನೋಟರಿ, ದಾವಣಗೆರೆಯವರ ಮುಂದೆ ಪ್ರಮಾಣೀಕರಿಸಿದ್ದೇನೆ. ಇನ್ನು ಮುಂದೆ ನನ್ನ ಎಲ್ಲಾ ದಾಖಲಾತಿಗಳಲ್ಲಿ ಈ ಕೆಳಕಂಡ ಸಹಿಂತೆ ಇರುತ್ತದೆ ಎಂದು ದೃಢೀಕರಿಸಿದ್ದೇನೆ. ಸಹಿ/- ಹಯಾತ್ ಸಾಬ್

**ನೇರ ಪರೀಕ್ಷೆಗಳು**
DIRECT EXAMS
PUC, Commerce, Arts, Science
ಎಸ್.ಎಸ್.ಎಲ್.ಸಿ. NTC, ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ವಿದ್ಯಾಸಂಸ್ಥೆ (ರಿ.)
ಎಲ್.ಕೆ.ಕಾಂಪ್ಲೆಕ್ಸ್ 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ. 9740258276
ಕೆಲವೇ ಸೀಟುಗಳಿವೆ.

## ಹರಿಹರದಲ್ಲಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ



ಹರಿಹರ, ಜು.10- ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ಇಂದು ನಗರದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ ಅವರಿಗೆ ಮನವಿಯನ್ನು ಸಲ್ಲಿಸಿದರು. ಶೃತಿ, ಉಮಾದೇವಿ, ವೀರಮ್ಮ, ಶಾಂತಾ, ವೈ.ಅನಿತಾ, ಲಕ್ಷ್ಮಿ, ಗೀತಾ, ರೇಣುಕಾ, ಜ್ಯೋತಿ, ಎಂ.ಆರ್.ರೇಣುಕಾ, ವೇದಾವತಿ, ಕೆ. ರಾಧಾ, ಮಂಜುಳಾ, ಜಯಶ್ರೀ, ಶ್ವೇತಾ, ಸುನಿತಾ, ಯಶೋಧಮ್ಮ, ಹೊನ್ನಮ್ಮ ರೇಖಾ ಹಾಗೂ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಪತ್ನಿ ಕೊಲೆ : ಪತಿಗೆ ಶಿಕ್ಷೆ

ದಾವಣಗೆರೆ, ಜು.10- ತನ್ನ ಪತ್ನಿಯನ್ನೇ ಕೊಲೆ ಮಾಡಿದ ಪತಿಗೆ 3 ವರ್ಷ ಶಿಕ್ಷೆ, 5 ಸಾವಿರ ರೂ. ದಂಡ ಹಾಗೂ ಜೀವಾವಧಿ ಶಿಕ್ಷೆ, 25 ಸಾವಿರ ದಂಡ ವಿಧಿಸಿ ಇಲ್ಲಿನ ಒಂದನೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಕೆಂಗಬಾಲಯ್ಯ ಅವರು ನಿನ್ನೆ ತೀರ್ಪು ನೀಡಿದ್ದಾರೆ.

ಮತ್ತಿ ಗ್ರಾಮದ ಬೀರಪ್ಪ ಶಿಕ್ಷೆಗೊಳಗಾದ ಪತಿ. ಈತ ಸೆಪ್ಟೆಂಬರ್ 14, 2018ರಂದು ತನ್ನ ಪತ್ನಿ ಸಾವಿತ್ರಮ್ಮನನ್ನು ಕೊಲೆ ಮಾಡಿದ್ದ. ಈ ಬಗ್ಗೆ ಹದಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣಕ್ಕೆ ಸಂಬಂಧ ಪಟ್ಟಂತೆ ಅಂದು ಗ್ರಾಮಾಂತರ ಸಿಪಿಐ ಆಗಿದ್ದ ತನಿಖಾಧಿಕಾರಿ ಹೆಚ್. ಗುರುಬಸವರಾಜ ಅವರು ದೋಷಾರೋಪಣೆ ಪಟ್ಟಿ ಯನ್ನು ಸಲ್ಲಿಸಿದ್ದರು. ಸರ್ಕಾರಿ ಅಭಿಯೋಜಕ ಕೆಂಚಪ್ಪ ವಾದ ಮಂಡಿಸಿದ್ದರು.

# ಖಾಸಗಿ ಫೈನಾನ್ಸ್ ಸಂಸ್ಥೆಗಳಿಂದ ಸ್ವಸಹಾಯ ಸಂಘಗಳ ಸಭೆ: ಕೊರೊನಾ ವೈರಸ್ ಹರಡುವ ಭೀತಿ



### ಜಗಳೂರು ತಾಲ್ಲೂಕು ಪಂಚಾಯತ್ ಕೆಡಿಪಿ ಸಭೆಯಲ್ಲಿ ಆತಂಕ

ಜಗಳೂರು, ಜು.10- ತಾಲ್ಲೂಕಿನಾದ್ಯಂತ ಖಾಸಗಿ ಫೈನಾನ್ಸ್ ಕಂಪನಿಗಳು ಸಾಲ ವಸೂಲಾತಿಗಾಗಿ ಮಹಿಳಾ ಸ್ವಸಹಾಯ ಸಂಘಗಳ ಸಭೆಗಳನ್ನು ನಡೆಸುತ್ತಿರುವುದರಿಂದ ಇಲ್ಲಿ ಯಾವುದೇ ಸಾಮಾಜಿಕ ಅಂತರ ಹಾಗೂ ಸ್ಯಾನಿಟೈಸರ್ ಸೇರಿದಂತೆ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಇರುವುದರಿಂದ ಕೊರೊನಾ ಹರಡುವ ಭೀತಿ ಇದೆ ಎಂದು ಇಂದು ನಡೆದ ತಾಲ್ಲೂಕು ಪಂಚಾಯತ್ ಕೆಡಿಪಿ ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಬಿ. ಸಿದ್ದೇಶ್ ಆತಂಕ ವ್ಯಕ್ತಪಡಿಸಿದರು.

ತಾಲ್ಲೂಕಿನಾದ್ಯಂತ ಸ್ಪಂದನ, ಗ್ರಾಮೀಣ ಕೂಟ ಸೇರಿದಂತೆ ಹಲವಾರು ಖಾಸಗಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳು ನೀಡಿರುವ ಸಾಲ ವಸೂಲಾತಿಗಾಗಿ ಗ್ರಾಮೀಣ ಪ್ರದೇಶದಲ್ಲಿ ಸದಸ್ಯರು ಸಭೆ ಸೇರುತ್ತಿದ್ದಾರೆ. ಆದರೆ, ಇಲ್ಲಿ ಯಾವುದೇ ಸಾಮಾಜಿಕ ಅಂತರ ಇರುವುದಿಲ್ಲ. ಇದರಿಂದ ಕೊರೊನಾ ಹರಡುವ ಭೀತಿ ಇದೆ ಎಂದರು.

ಆರ್‌ಬಿ ನಿಯಮಾವಳಿ ಪ್ರಕಾರ ಆಗಸ್ಟ್ ತಿಂಗಳ ಕೊನೆಯವರೆಗೂ ಸಾಲ ವಸೂಲಾತಿಗೆ ಅವಕಾಶ ಇರುವುದಿಲ್ಲ. ಆದರೂ ಸಹ ಖಾಸಗಿ ಫೈನಾನ್ಸ್ ಕಂಪನಿಯವರು ಮಹಿಳೆಯರಿಗೆ ಸಾಲ ವಸೂಲಾತಿಗಾಗಿ ಸರಣಿ ಸಭೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ನಡೆಸುತ್ತಿರುವುದು ಸರಿಯಲ್ಲ ಎಂದು ಆಕ್ಷೇಪಿಸಿದರು.

ತಕ್ಷಣವೇ ತಾಲ್ಲೂಕು ವೈದ್ಯಾಧಿಕಾರಿಗಳು ಆಶಾ ಕಾರ್ಯಕರ್ತೆಯರ ಮೂಲಕ ಈ ಸಭೆಗಳು ನಡೆಸುವುದನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು. ತಾಲ್ಲೂಕಿನಲ್ಲಿ ಒತ್ತಾಯ ಪೂರ್ವಕವಾಗಿ ಸಾಲ ವಸೂಲಾತಿ ಮಾಡದಂತೆ ಕ್ರಮ ವಹಿಸಬೇಕು. ಈ ಬಗ್ಗೆ ತಹಶೀಲ್ದಾರ್‌ರಿಗೆ ಸೂಚನೆ ನೀಡಬೇಕೆಂದು ತಿಳಿಸಿದರು.

ಪ್ರಗತಿ ವರದಿ ನೀಡಿದ ತಾಲ್ಲೂಕು ವೈದ್ಯಾಧಿಕಾರಿ ಡಾ|| ನಾಗರಾಜ್ ಪಟ್ಟಣದಲ್ಲಿ ಇಂದು 4 ಪ್ರಕರಣಗಳು ವರದಿಯಾಗಿದ್ದು, ಆ ಪ್ರದೇಶದಲ್ಲಿ ಸೀಲ್‌ಡೌನ್ ಮಾಡಲಾಗಿದೆ. ನಾಲ್ಕು ಜನರನ್ನು ದಾವಣಗೆರೆ ಸಿಟಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಥಮ ಹಾಗೂ ದ್ವಿತೀಯ ಹಂತದ ಸಂಪರ್ಕಿತರನ್ನು ಗಂಟಲು ದ್ರವ ಪರೀಕ್ಷೆ ಒಳಪಡಿಸಲಾಗಿದ್ದು, ವರದಿ ನಿರೀಕ್ಷೆಯಲ್ಲಿದ್ದೇವೆ. ಜಿಲ್ಲಾಧಿಕಾರಿಗಳ ಸೂಚನೆ ಅನ್ವಯ ತಾಲ್ಲೂಕಿನಲ್ಲಿ ಕೋವಿಡ್ ಆಸ್ಪತ್ರೆಯೊಂದನ್ನು ಸ್ಥಾಪಿಸಬೇಕಾಗಿದೆ ಎಂದು ತಿಳಿಸಿದರು.

ಸಹಾಯಕ ಕೃಷಿ ಅಧಿಕಾರಿ ವೆಂಕಟೇಶ್ ಪ್ರಗತಿ ವರದಿ ನೀಡಿ, ತಾಲ್ಲೂಕಿನಲ್ಲಿ ಮೆಕ್ಕೆಜೋಳ ಬೆಳೆದ ರೈತರಿಗೆ 5000 ರೂ. ಸಹಾಯ ಧನವನ್ನು 15 ಸಾವಿರ ರೈತರಿಗೆ ನೀಡಲಾಗಿದೆ. ಉಳಿದಂತೆ ಇನ್ನೂ 17,000 ರೈತರು ನೋಂದಣಿ ಮಾಡಿಕೊಂಡಿಲ್ಲ ಎಂದು ತಿಳಿಸಿದರು.

ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ ವಿಮೆ ಪಾವತಿಸಲು ಇದೇ ತಿಂಗಳು 31 ರವರೆಗೂ ಅವಕಾಶ ಇದ್ದು, ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ರುದ್ರಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ವೆಂಕಟೇಶ್, ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಇಲಾಖೆ ಸಹಾಯಕ ಅಭಿಯಂತರ ಹೇಮಾಜಿ ನಾಯಕ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ. ಮಹೇಶ್, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್‌ಮೂರ್ತಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಪ್ರಗತಿ ವರದಿ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ತಾ.ಪಂ ಅಧ್ಯಕ್ಷರಾದ ಮಂಜುಳಮ್ಮ ವಹಿಸಿದ್ದರು. ಉಪಾಧ್ಯಕ್ಷ ಮಾದೇಗೌಡರ ಬಸವರಾಜಪ್ಪ, ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಾನಾಯಕ ಉಪಸ್ಥಿತರಿದ್ದರು.

## ಪರೀಕ್ಷೆ ಇಲ್ಲದೆ ಪಾಸ್

(**1ನೇ ಪುಟದಿಂದ**) ಸಹಾಯ ವಾಣಿಯಾದ 080 22341394ಗೆ ಕರೆ ಮಾಡಬಹುದು. 2020-21ರ ಶೈಕ್ಷಣಿಕ ಸಾಲಿನ ಮೊದಲ ಸೆಮಿಸ್ಟರ್‌ಗೆ ಸೆಪ್ಟೆಂಬರ್ 1 ರಿಂದಲೇ ಆನ್‌ಲೈನ್ ತರಗತಿಗಳು ಹಾಗೂ ಅಕ್ಟೋಬರ್ 1 ರಿಂದ ಆಫ್‌ಲೈನ್ ತರಗತಿಗಳು ಆರಂಭವಾಗುತ್ತವೆ. ಅದಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ವಿವಿಗಳು, ಕಾಲೇಜುಗಳಿಗೆ ಸೂಚಿಸಲಾಗಿದೆ ಎಂದು ಅಶ್ವತ್ಥನಾರಾಯಣ ತಿಳಿಸಿದ್ದಾರೆ.

## ಸಿಐಸಿಎಸ್‌ಇ ಫಲಿತಾಂಶ

(**1ನೇ ಪುಟದಿಂದ**) ಫಲಿತಾಂಶ ಪ್ರಕಟಿಸಲಾಗಿದೆ.

2,06,525 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿದ್ದಾರೆ. 1,377 ವಿದ್ಯಾರ್ಥಿಗಳು ಫೇಲ್ ಆಗಿರುವುದಾಗಿ ತಿಳಿಸಲಾಗಿದೆ. ಹನ್ನೆರಡನೇ ತರಗತಿಯ ಪರೀಕ್ಷೆಯಲ್ಲಿ 85,611 ವಿದ್ಯಾರ್ಥಿಗಳು ಪಾಸ್ ಹಾಗೂ 2,798 ವಿದ್ಯಾರ್ಥಿಗಳು ಫೇಲ್ ಆಗಿದ್ದಾರೆ.

# ಹರಿಹರ : ಕೊರೊನಾ ತಡೆಗೆ ಟಾಸ್ಕ್‌ಫೋರ್ಸ್ ಸಮಿತಿ ರಚನೆ




ಹರಿಹರ, ಜು.10- ನಗರದಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಹೆಚ್ಚಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಸಹಕಾರದಿಂದ ವಾರ್ಡ್ ಮುಖ್ಯಸ್ಥರ ಸಮ್ಮುಖದಲ್ಲಿ ಟಾಸ್ಕ್‌ಫೋರ್ಸ್ ಸಮಿತಿ ರಚಿಸಿ, ಅದರ ಮುಖಾಂತರ ಕೋವಿಡ್ 19 ರೋಗ ತಡೆಗಟ್ಟಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ ತಿಳಿಸಿದರು.

ನಗರಸಭೆ ಸಭಾಂಗಣದಲ್ಲಿ ನಡೆದ ಕೋವಿಡ್-19 ವಿಚಾರವಾಗಿ ನಗರದ ವಿವಿಧ ವಾರ್ಡ್ ಸದಸ್ಯರು, ಮುಖ್ಯಸ್ಥರು, ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಸೇರಿದಂತೆ, ಇತರೆ ಹಲವಾರು ಇಲಾಖೆಯ ಸಹಯೋಗದೊಂದಿಗೆ ಕೊರೊನಾ ಸೋಂಕು ಕಡಿಮೆ ಮಾಡುವುದಕ್ಕೆ ವಾರ್ಡ್ ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯರಿಗೆ ತರಬೇತಿ ಕಾರ್ಯಾಗಾರದ ಸಭೆಯಲ್ಲಿ ಅವರು ಮಾತನಾಡಿದರು.

ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್ ಮಾತನಾಡಿ, ಇದುವರೆಗೆ 44 ಕೊರೊನಾ ಸೋಂಕು ಪ್ರಕರಣಗಳು ದೃಢಪಟ್ಟಿವೆ.

ಸಾರ್ವಜನಿಕರು ಜಿಲ್ಲಾಸ್ಪತ್ರೆಗೆ ತೆರಳಿ, ಚಿಕಿತ್ಸೆ ಪಡೆಯಲು ತೊಂದರೆಯಾಗುತ್ತಿರುವುದನ್ನು ಗಮ ನಿಸಿ, ಸರ್ಕಾರ ತಾಲ್ಲೂಕು ಮಟ್ಟದಲ್ಲಿ ಆಸ್ಪತ್ರೆಯನ್ನು ಇನ್ನು ಎರಡು ದಿನಗಳಲ್ಲಿ ತೆರೆಯಲಿದೆ. ಇದರಿಂ ದಾಗಿ ಜನತೆಗೆ ಅನುಕೂಲ ಆಗಲಿದೆ ಎಂದು ಹೇಳಿದರು.

ತಹಶೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ಮಾತನಾಡಿ, ಕೋವಿಡ್-19 ನಿರ್ವಹಣೆ ತರಬೇತಿ ಕಾರ್ಯಾಗಾರ ಮತ್ತು ವಾರ್ಡ್ ಮಟ್ಟದ ಟಾಸ್ಕ್‌ಫೋರ್ಸ್ ಸಭೆ ಗ್ರೂಪ್‌ನಲ್ಲಿ ಮಾಹಿತಿ ಹಂಚಿಕೆಯನ್ನು ಮಾಡಿಕೊಳ್ಳಲು ವ್ಯವಸ್ಥೆ ಮಾಡಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ನಿಂಬಕ್ಕ ಚಂದಾಪೂರ್, ಇಬ್ರಾಹಿಂ, ಮುಖಂಡರಾದ ಹನುಮಂತಪ್ಪ, ಮರಿದೇವಪ್ಪ, ಮೋತ್ಯನಾಯ್ಕ್, ರಾಗಿಣಿ, ನಗರಸಭೆ ಅಧಿಕಾರಿಗಳಾದ ಮಂಜುನಾಥ್, ಮಹೇಶ್, ರವಿಪ್ರಕಾಶ್, ಕೋಡಿ ಭೀಮರಾಯ್ ಮತ್ತಿತರರು ಹಾಜರಿದ್ದರು.

## ಹರಿಹರದಲ್ಲಿ ಇಬ್ಬರಿಗೆ ಕೊರೊನಾ ಪಾಸಿಟಿವ್

(**1ನೇ ಪುಟದಿಂದ**) ಒಳಪಡಿಸಲಾಗಿದೆ. ಇದರಲ್ಲಿ ಹಲವಾರು ವ್ಯಕ್ತಿಗಳ ವರದಿ ಬಂದಿದ್ದು, ಇನ್ನೂ ಬಾಕಿ ಉಳಿದ ವರದಿಗಳು ಶೀಘ್ರದಲ್ಲೇ ಬರಬಹುದು ಎಂದು ಹೇಳಿದರು.

ನಗರದಲ್ಲಿ ಕಂಟೈನ್‌ಮೆಂಟ್ ಝೋನ್‌ಗಳು ಹೆಚ್ಚಾಗಿದ್ದು, ಸಿಬ್ಬಂದಿಗಳ ಕೊರತೆ ಇದೆ. ಆಶಾ ಕಾರ್ಯಕರ್ತೆಯರೂ ಸಹ ಮುಷ್ಕರ ನಡೆಸುತ್ತಿದ್ದಾರೆ. ಈ ನಡುವೆಯೂ ಆರೋಗ್ಯ ಇಲಾಖೆ ಸಿಬ್ಬಂದಿ ಕೊರೊನಾ ತಡೆಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಡಾ. ವಿಶ್ವನಾಥ್ ಮಾತನಾಡಿ, ಈಗಾಗಲೇ ನಗರದ ಗುತ್ತೂರು ಗ್ರಾಮದ ಬಳಿ ಇರುವ ಹಾಸ್ಟೆಲ್ ಆವರಣದಲ್ಲಿ ಕ್ವಾರಂಟೈನ್ ನಲ್ಲಿ ಇದ್ದ ರಾಜನಹಳ್ಳಿ ಗ್ರಾಮದವರು ಮತ್ತು ನಗರದ ಎ.ಕೆ. ಕಾಲೋನಿಯಲ್ಲಿ ವಾಸವಾಗಿರುವ ಸುಮಾರು 46 ವ್ಯಕ್ತಿಗಳನ್ನು ಮನೆಗಳಿಗೆ ವಾಪಸ್ ಕಳಿಸಿಕೊಡಲಾಗಿದೆ. ಉಳಿದ 50 ಜನರನ್ನು ಕ್ವಾರಂಟೈನ್ ನಲ್ಲಿ ಇರಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಎ.ವಿ. ಹೊರಕೇರಿ, ಸುಧಾ ಇತರರು ಹಾಜರಿದ್ದರು.

## ಅಡುಗೆ ಸಿಲಿಂಡರ್ ಹೊತ್ತೊಯ್ದ ಕಳ್ಳರು

ದಾವಣಗೆರೆ, ಜು.10- ಮನೆಗೆ ಕನ್ನ ಹಾಕಿರುವ ಕಳ್ಳರು, 30 ಸಾವಿರ ನಗದು, ಸುಮಾರು 35 ಸಾವಿರ ಮೌಲ್ಯದ 10 ಗ್ರಾಂನ ಬಂಗಾರದ ಉಂಗುರದ ಜೊತೆಗೆ ಅಡುಗೆ ಸಿಲಿಂಡರನ್ನೂ ಸಹ ಬಿಡದೇ ಹೊತ್ತೊಯ್ದಿರುವ ಘಟನೆ ಇಲ್ಲಿನ ಬಸವನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಪಿಂಜಾರ್ ಗಲ್ಲಿ ವಾಸಿ ಹೂವಿನ ಅಂಗಡಿಯಲ್ಲಿ ಕೆಲಸ ಮಾಡುವ ಅಜ್ಗರ್ ಅಲಿ ಎಂಬಾತ ಕುಟುಂಬ ಸಮೇತರಾಗಿ ನಗರದ ಬಿಸ್ಮಿಲ್ಲಾ ಲೇಔಟ್ ನಲ್ಲಿ ಸಂಬಂಧಿಕರ ಮದುವೆ ಕಾರ್ಯಕ್ಕೆ ಗುರುವಾರ ರಾತ್ರಿ ಮನೆಗೆ ಬೀಗ ಹಾಕಿಕೊಂಡು ಹೋಗಿದ್ದ ಸಂದರ್ಭದಲ್ಲಿ ಕಳ್ಳರು ಈ ಕೃತ್ಯ ನಡೆಸಿದ್ದಾರೆ.

## 21 ಪಾಸಿಟಿವ್

(**1ನೇ ಪುಟದಿಂದ**) ಏಳು, ಹೊನ್ನಾಳಿ ತಾಲ್ಲೂಕಿನ ಕ್ಯಾಸಿನಕೆರೆಯ ಇಬ್ಬರು ಹಾಗೂ ಚನ್ನಗಿರಿ ತಾಲ್ಲೂಕಿನ ನಲ್ಲೂರಿನ ಒಬ್ಬರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಕೆಎಸ್ಸಾರ್ಟಿಸಿ ಉದ್ಯೋಗಿಯೊಬ್ಬರಲ್ಲಿ ಸೋಂಕು ದೃಢಪಟ್ಟಿದೆ. ರಾಣೇಬೆನ್ನೂರಿನ ರೋಗಿಯೊಬ್ಬರು ದಾವಣಗೆರೆಗೆ ಚಿಕಿತ್ಸೆಗಾಗಿ ಬಂದಾಗ ಕೊರೊನಾ ಸೋಂಕು ಪತ್ತೆಯಾಗಿದೆ. ಹರಪನಹಳ್ಳಿಯ ಚಿಕ್ಕಮೇಗಳಗೆರೆ ವ್ಯಕ್ತಿಯೂ ಸಹ ದಾವಣಗೆರೆಗೆ ಬಂದಾಗ ಸೋಂಕು ಪತ್ತೆಯಾಗಿದೆ.

## ಇ-ಮೇಲ್ ಸಮನ್ಸ್

(**1ನೇ ಪುಟದಿಂದ**) ಲಾಕ್‌ಡೌನ್ ಕಾರಣದಿಂದಾಗಿ ಸಮನ್ಸ್ ಕಳಿಸಲು ಸಾಧ್ಯವಾಗದೇ ಇದ್ದ ಸಂದರ್ಭದಲ್ಲಿ ಇ-ಮೇಲ್, ಫ್ಯಾಕ್ಸ್ ಇಲ್ಲವೇ ವಾಟ್ಸ್‌ಅಪ್ ರೀತಿಯ ಆಪ್‌ಗಳನ್ನು ಬಳಸಿಕೊಂಡು ಸಮನ್ಸ್ ಕಳಿಸಬಹುದಾಗಿದೆ ಎಂದು ನ್ಯಾಯಾಲಯ ಹೇಳಿದೆ.

# ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ಹಿಂಪಡೆಗೆ ಆಗ್ರಹ




### ಡಿಎಸ್‌ಎಸ್ ಪ್ರತಿಭಟನೆ

ದಾವಣಗೆರೆ, ಜು.10- ಕರ್ನಾಟಕ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರುವುದನ್ನು ಖಂಡಿಸಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಇಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಂತರ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ಕೈಬಿಡುವಂತೆ ಮನವಿ ಸಲ್ಲಿಸಲಾಯಿತು.

ಭೂ ಒಡೆತನವು ಸೇರಿದಂತೆ ರೈತ ಹಾಗೂ ಕೃಷಿ ಕಾರ್ಮಿಕರ ಹಿತಾಸಕ್ತಿಗೆ ಬದ್ಧವಾಗಿದ್ದ ಭೂ ಸುಧಾರಣಾ ಕಾಯ್ದೆಯು ಇಡೀ ದೇಶಕ್ಕೆ ಮಾದರಿಯಾಗಿತ್ತು. ರೈತರ, ಕಾರ್ಮಿಕರ ಪರವಾಗಿದ್ದ ಜನಪರ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿರುವ ರಾಜ್ಯ ಸರ್ಕಾರದ ಕ್ರಮವು ರೈತ ವಿರೋಧಿಯಾಗಿದ್ದು, ಬಂಡವಾಳ ಶಾಹಿ ಕಾರ್ಪೊರೇಟ್ ಕಂಪನಿಗಳ ಪರವಾದ ನಿಲುವಿನಿಂದ ಕೂಡಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಸಂಚಾಲಕ ಹೂವಿನಮಡು ಅಂಜಿನಪ್ಪ, ರಾಜ್ಯ ಸಂಘಟನಾ ಸಂಚಾಲಕ ಕಬ್ಬಳ್ಳಿ ಮೈಲಪ್ಪ, ತಾಲ್ಲೂಕು ಸಂಚಾಲಕ ಗುಮ್ಮನೂರು ರಾಮಚಂದ್ರಪ್ಪ, ಪುಣಭಗಟ್ಟ ನಿಂಗಪ್ಪ, ರವಿ, ಆನಗೋಡು ಸುರೇಶ್, ಅಳಗವಾಡಿ ಬಾಬು, ಕೊಡಗನೂರು ಲಕ್ಷ್ಮಣ್, ವಾಸುದೇವ, ಪುಣಭಗಟ್ಟ ಮಂಜು, ಕೋಗಲೂರು ಪ್ರಕಾಶ್, ಆನಗೋಡು ಪ್ರಶಾಂತ್, ರಾಜು, ನಾಗನೂರು ರಾಜು, ಹೆದ್ನೆ ಮೂರ್ತಿ, ಕೋಲ್ಕುಂಟೆ ಚಂದ್ರಪ್ಪ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಕೊರೊನಾ ವಿರುದ್ಧದ ಹೋರಾಟ : ಡಿಸಿ, ಎಸ್ಪಿಗೆ ಇಂದು ನಗರದಲ್ಲಿ ಅಭಿನಂದನೆ

ಕೊರೊನಾ ವೈರಸ್ ತಡೆಗಟ್ಟುವ ನಿಟ್ಟಿನಲ್ಲಿ ಹಗಲಿರುಳು ಶ್ರಮಿಸುತ್ತಿರುವ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಆಯುಕ್ತ ವಿಶ್ವನಾಥ್ ಮುದಜ್ಜಿ ಅವರುಗಳೂ ಸೇರಿದಂತೆ, ಇತರರಿಗೆ ಅಭಿನಂದನಾ ಕಾರ್ಯಕ್ರಮ ಏರ್ಪಾಡಾಗಿದೆ.

ಹೋಟೆಲ್ ಉದ್ಯಮಿದಾರರ ಸಂಘದಿಂದ ಪಿ.ಬಿ. ರಸ್ತೆಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣದ ಬಳಿ ಇರುವ ಹೋಟೆಲ್ ಅಪೂರ್ವ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಈ ಕಾರ್ಯಕ್ರಮ ನಡೆಯಲಿದೆ.

ಹೋಟೆಲ್ ಉದ್ಯಮಿದಾರರ ಸಂಘದ ಅಧ್ಯಕ್ಷರೂ ಆಗಿರುವ ಹಿರಿಯ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

## ಬಂಗಾರಪೇಟೆ ತಹಶೀಲ್ದಾರ್ ಹತ್ಯೆ: ಸರ್ಕಾರಿ ನೌಕರರ ಪ್ರತಿಭಟನೆ




ದಾವಣಗೆರೆ, ಜು.10- ಬಂಗಾರಪೇಟೆ ತಾಲ್ಲೂಕು ತಹಶೀಲ್ದಾರ್ ಬಿ.ಕೆ. ಚಂದ್ರಮೌಳೇಶ್ವರ ಅವರನ್ನು ಹತ್ಯೆ ಮಾಡಿರುವುದನ್ನು ಖಂಡಿಸಿರುವ ಜಿಲ್ಲಾ ಸರ್ಕಾರಿ ನೌಕರರು, ಹತ್ಯೆ ಹಿನ್ನೆಲೆಯಲ್ಲಿ ಕಠಿಣ ಕಾನೂನು ರೂಪಿಸಿ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರಿಗೆ ಅಗತ್ಯ ರಕ್ಷಣೆ ನೀಡುವಂತೆ ಆಗ್ರಹಿಸಿ ನಗರದಲ್ಲಿ ಇಂದು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ನೇತೃತ್ವದಲ್ಲಿ ಜಮಾಯಿಸಿದ್ದ ಪ್ರತಿಭಟನಾ ನಿರತ ಸರ್ಕಾರಿ ನೌಕರರು, ಸರ್ಕಾರಿ ನೌಕರರಿಗೆ ಕರ್ತವ್ಯ ನಿರ್ವಹಿಸುವ ಸಂದರ್ಭಗಳಲ್ಲಿ ಹಲ್ಲೆ ಮತ್ತು ದೌರ್ಜನ್ಯಗಳು ಆಗಿಂದಾಗ್ಗೆ ಸಂಭವಿಸುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಂತರ ಜಿಲ್ಲಾಧಿಕಾರಿ ಮುಖಾಂತರ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿದರು.

ಕೂಡಲೇ ತಪ್ಪಿತಸ್ಥರನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು ಎಂದು ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ತಹಶೀಲ್ದಾರ್ ಗಿರೀಶ್, ಸಂಘಟನೆಯ ಗೌರವಾಧ್ಯಕ್ಷ ಡಾ. ಉಮೇಶ್, ಕಾರ್ಯದರ್ಶಿ ಬಿ. ಶಿವಣ್ಣ, ಖಜಾಂಚಿ ಎಸ್. ಕಲ್ಲೇಶ್ವರಪ್ಪ, ರಾಜ್ಯ ಪರಿಷತ್ ಸದಸ್ಯ ಎನ್. ಮಾರುತಿ, ಜಿಲ್ಲಾ ಗ್ರಾಮ ಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷ ಲೋಹಿತ್, ಕಂದಾಯ ಇಲಾಖೆ ನೌಕರರ ಸಂಘದ ಕಾರ್ಯದರ್ಶಿ ಅಜ್ಜಯ್ಯ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ತೋಳಹುಣಸೆ : ಕಲಿಕಾ ಕಿಟ್‌ಗಳ ವಿತರಣೆ




ದಾವಣಗೆರೆ, ಜು.10- ತೋಳಹುಣಸೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರೋಟರಿ ಕ್ಲಬ್ ದಾವಣಗೆರೆ ದಕ್ಷಿಣದ ವತಿಯಿಂದ ಮಕ್ಕಳಿಗೆ ಕಲಿಕಾ ಕಿಟ್‌ಗಳನ್ನು ವಿತರಿಸಲಾಯಿತು. ಶಾಸಕರುಗಳಾದ ಎಸ್.ಎ.ರವೀಂದ್ರನಾಥ್, ಪ್ರೊ|| ಲಿಂಗಣ್ಣ, ಪ್ರೊ|| ಪರಶುರಾಮ, ಗಜಾನನ ಭೂತೆ, ಅಶೋಕ್ ರಾಯಭಾಗಿ, ವಿಶ್ವಜಿತ್ ಜಾಧವ್, ಸುಜಿತ್ ಕುಮಾರ್, ಡಾ|| ರಜಿನಿ, ಅಮೀರಬಾನು ಮತ್ತಿತರರು ಸಮಾರಂಭದಲ್ಲಿ ಹಾಜರಿದ್ದರು.

### ಪ್ರಕೃತಿ ರಕ್ಷಕಿ- ಶಿಕ್ಷಕಿ

ಸರ್ವವು ಅಡಗಿದೆ ಕಾಲಗರ್ಭದಲಿ
ಕಾಣರಾರು ಮಹಿಮಾ ಅದರಲಿ
ಕಾಲಚಕ್ರದ ಏರಿಳಿತದ ನಿಯಮಕೆ
ಬಾಗಬೇಕಿತ್ತೆಲ್ಲರೂ ರೀತಿ- ನೀತಿಗೆ.

ಅತ್ಯಾಸೆಯ ವೇಗದ ಓಟಕ್ಕೆ
ಅರಿಯಲೇಬೇಕಿತ್ತು ಪರಿಣಾಮಕ್ಕೆ
ಅಳಿಸಲು ಹೋದರೆ ವಿಧಿ ಬರಹ
ಅನುಭವಿಸಲೇ ಬೇಕು ತರತರಹ.

ಮಗ್ಗುಲಾಗಿಹುದು ಬದುಕಿಂದು
ಅರ್ಥ ಕಳೆದುಕೊಂಡಿಹ ಬಾಳಿಂದು
ತಂತ್ರ ಕುತಂತ್ರದಲಿ ಮಾಡಿದ ಅಡುಗೆ
ಮಾಡಿದ್ದುಣ್ಣೋ ಎಲ್ಲವೂ ನೀನಿಂದು.

ಬಿತ್ತಿದ ಫಲವದು ಕರ ಕರದಲ್ಲಿ
ಮಕ್ಕಳೆಲ್ಲರ ಭವಿಷ್ಯ ಮಸುಕಲ್ಲಿ
ಅಂಕ ಅಂಕಕ್ಕಿತ್ತು ಜಿದ್ದಿನ ಹೋರಾಟ
ಕೊರೊನಾ ಕಲಿಸಿತೆ ಬಾಳಿಗೆ ಪಾಠ!!

ಆತಂಕ ಸರಿಸಿ ಕಲಿಯಿರಿ ಮಕ್ಕಳೇ
ಸಂಸ್ಕೃತಿ, ಸಂಸ್ಕಾರ, ನೀತಿ ಪಾಠವನು
ಓದು- ಬರಹ ಜೊತೆ ಜೊತೆಗಿರಲೆಂದು
ಭವಿಷ್ಯದ ಪ್ರಜೆಗಳು ನೀವೇ ಅಲ್ಲವೇ?

- ವೀಣಾ ಕೃಷ್ಣಮೂರ್ತಿ, ದಾವಣಗೆರೆ.

### ಆಶಾವಾದ

ಆಡುವ ನುಡಿ
ನಡೆವ ನಡೆ
ಬರೆವ ಪದಪುಂಜ
ವಾಸ್ತವದಲ್ಲೇ
ಮಹಾಕ್ರಾಂತಿಯ
ಮಾಡದಿದ್ದರೂ
ಜಡ ಬಡ ಮನಕೆ
ಭವಿಷ್ಯದ ಕುರುಹು
ತೋರಿಸಿದರೂ ಸಾಕೊ
ಕನಸುವ ಕಾವ್ಯಾತ್ಮಾ

- ಆರ್.ಶಿವಕುಮಾರ ಸ್ವಾಮಿ ಕುರ್ಕಿ

# ಭಾರತ ಪ್ಯಾಕೇಜ್ ನವಭಾರತ ನಿರ್ಮಾಣಕ್ಕೆ ಬುನಾದಿ

(**1ನೇ ಪುಟದಿಂದ**) ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ರಿಯಲ್ ಎಸ್ಟೇಟ್ ವಲಯ ಮತ್ತು ವಿದ್ಯುತ್ ವಿತರಣಾ ಕ್ಷೇತ್ರಕ್ಕೆ ಮೀಸಲಿಡಲಾಗಿದೆ. 3.16 ಲಕ್ಷ ಕೋಟಿಗಳನ್ನು ರೈತರು, ಗ್ರಾಮೀಣ ಆರ್ಥಿಕತೆ, ವಲಸೆ ಕಾರ್ಮಿಕರು, ನಗರದ ಬಡವರು, ಮಧ್ಯಮ ವರ್ಗದವರ ಮನೆ ಖರೀದಿದಾರರಿಗೆ ಮೀಸಲಿಡಲಾಗಿದೆ. ಬೀದಿ ಬದಿ ವ್ಯಾಪಾರಿಗಳಿಗೆ 10 ಸಾವಿರ ಸುಲಭ ಸಾಲ ಸಿಗಲಿದೆ.

ದೇಶಾದ್ಯಂತ ವಿಮಾನ ನಿಲ್ದಾಣ, ಬಂದರು ನಿರ್ಮಾಣ ಸೇರಿದಂತೆ ಮೂಲ ಸೌಕರ್ಯ ಅಭಿವೃದ್ಧಿಗೆ 1 ಲಕ್ಷ ಕೋಟಿ ಮೀಸಲಿಡಲಾಗಿದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ರೂ.3.00 ಲಕ್ಷ ಕೋಟಿ ಕೊಲ್ಯಾಟರಲ್ ಫ್ರೀ ಸಾಲ ನೀಡುವ ಯೋಜನೆಯಡಿ ಇಲ್ಲಿಯವರೆಗೆ 30 ಲಕ್ಷ ಕೈಗಾರಿಕೆಗಳಿಗೆ ಅಂದಾಜು 1.10 ಲಕ್ಷ ಕೋಟಿ ಸಾಲ ವಿತರಣೆ ಮಾಡಲಾಗಿದೆ. ರೂ.200 ಕೋಟಿಗಿಂತ ಕಡಿಮೆ ಮೊತ್ತದ ಟೆಂಡರ್‌ಗಳಲ್ಲಿ ಗ್ಲೋಬಲ್ ಟೆಂಡರ್‌ದಾರರ ಪಾಲ್ಗೊಳ್ಳುವಿಕೆಯನ್ನು ರದ್ದುಗೊಳಿಸಲಾಗಿದೆ. ಇದರಿಂದ ಸ್ಥಳೀಯ ಕೈಗಾರಿಕೆಗಳು ಬಲಿಷ್ಟಗೊಳ್ಳಲಿವೆ.

ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯಡಿ 80 ಕೋಟಿ ಜನರಿಗೆ ನವೆಂಬರ್ 2020 ರವರೆಗೆ ಉಚಿತ ಪಡಿತರ ವಿತರಣೆಗೆ ಕ್ರಮಕೈಗೊಳ್ಳಲಾಗಿದೆ. ಉಜ್ವಲ ಯೋಜನೆಯಡಿ ನವೆಂಬರ್ 2020 ರವರೆಗೆ ಉಚಿತ ಗ್ಯಾಸ್ ಸಿಲಿಂಡರ್ ವಿತರಣೆಗೆ ಕ್ರಮಕೈಗೊಳ್ಳಲಾಗಿದೆ.

ಜೂನ್ 2020 ರವರೆಗೆ 36 ಕೋಟಿ ಬ್ಯಾಂಕ್ ಖಾತೆಗಳಿಗೆ ರೂ.64,500 ಕೋಟಿ ಹಣವನ್ನು ನೇರ ವರ್ಗಾವಣೆ ಮಾಡಲಾಗಿದೆ.

ವಲಸೆ ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಪಡಿತರ ಚೀಟಿ ಹೊಂದಿರುವ ಯಾವುದೇ ಕಾರ್ಮಿಕ ಅವನು ಬಯಸಿದ ರಾಜ್ಯದ ಯಾವುದೇ ಪಡಿತರ ಅಂಗಡಿಯಲ್ಲಿ ಪಡಿತರ ಪಡೆಯಬಹುದು.

2020-21 ನೇ ಸಾಲಿನಲ್ಲಿ ಉದ್ಯೋಗ ಖಾತ್ರಿ ಯೋಜನೆಗಾಗಿ ರೂ.61,000 ಕೋಟಿ ಅನುದಾನ ಮೀಸಲಿಡಲಾಗಿತ್ತು, ಲಾಕ್ ಡೌನ್ ಆದ ಪರಿಣಾಮ ಇದಕ್ಕೆ ಹೆಚ್ಚುವರಿಯಾಗಿ 40,000 ಕೋಟಿ ಅನುದಾನವನ್ನು ಒದಗಿಸಲಾಗಿದೆ. ದಿನಗೂಲಿಯನ್ನು ಹೆಚ್ಚಿಸಲಾಗಿದೆ. 70 ಲಕ್ಷ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ.

ಆತ್ಮ ನಿರ್ಭರ್ ಭಾರತ ಯೋಜನೆಯಡಿ 2 ಲಕ್ಷ ಕೋಟಿ ರಿಯಾಯಿತಿ ದರದಲ್ಲಿ 62,000 ಕೋಟಿ ಕೃಷಿ ಸಾಲ ವಿತರಣೆ ಮಾಡಲಾಗಿದೆ. ಕೃಷಿ ಮೂಲಸೌಕರ್ಯಕ್ಕಾಗಿ 1 ಲಕ್ಷ ಕೋಟಿ ಒದಗಿಸಲಾಗಿದೆ. ಪಶು ಸಂಗೋಪನಾ ಮೂಲಸೌಕರ್ಯ ಅಭಿವೃದ್ಧಿಗೆ 15,000 ಕೋಟಿ ಒದಗಿಸಲಾಗಿದೆ. ರೈತರನ್ನು ಎ.ಪಿ.ಎಂ.ಸಿ. ಗಳಿಂದ ಮುಕ್ತಗೊಳಿಸಲಾಗಿದೆ. 2020-21 ನೇ ಸಾಲಿನಲ್ಲಿ 14 ಮುಂಗಾರು ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆಯನ್ನು ಹೆಚ್ಚಿಸಲಾಗಿದೆ.

ರಕ್ಷಣಾ ಕ್ಷೇತ್ರ ಮತ್ತು ಅಂತರಿಕ್ಷ ವಲಯದಲ್ಲಿ ಸ್ವಾವಲಂಬನೆಯನ್ನು ಸಾಧಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ.

ಭಾರತದ ಮುಂದಿರುವ ಅನೇಕ ಸವಾಲುಗಳನ್ನು ನಮ್ಮ ಸರ್ಕಾರ ಮುಂದಿನ ನಾಲ್ಕು ವರ್ಷಗಳಲ್ಲಿ ಸಮರ್ಥವಾಗಿ ಎದುರಿಸಲಿದೆ, ಸವಾಲುಗಳಿಗೆ ಸಮರ್ಪಕ ಪರಿಹಾರ ಕಂಡುಕೊಂಡು ಭಾರತದ ಶಕ್ತಿ ಮತ್ತು ವರ್ಚಸ್ಸನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲಿದೆ. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರ ಸಕ್ರಿಯವಾಗಿರಲಿದೆ ಎಂದು ಸಿದ್ದೇಶ್ವರ ಹೇಳಿದ್ದಾರೆ.

# ಕೆಲಸ ಬಹಿಷ್ಕರಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

(**1ನೇ ಪುಟದಿಂದ**) ಸ್ಕ್ರೀನಿಂಗ್ ಮಾಡಿ, ಸೋಂಕು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ. ಅಪಾಯಕಾರಿ ಕೆಲಸಗಳಲ್ಲಿ ಎದೆಗುಂದದೆ ಕಾರ್ಯ ನಿರ್ವಹಿಸಿರುತ್ತಾರೆ. ಕೊರೊನಾ ನಿಯಂತ್ರಣ ಕಾರ್ಯದಲ್ಲಿ ನಿರತರಾಗಿರುವ ಆಶಾ ಕಾರ್ಯಕರ್ತೆಯರು ವೇತನವಿಲ್ಲದೆ, ರಕ್ಷಣೆಯಿಲ್ಲದೆ, ಸಾಫ್ಟ್‌ವೇರ್ ಅವ್ಯವಸ್ಥೆಯಿಂದಾಗಿ ಬಳಲಿದ್ದಾರೆ ಎಂದು ಪ್ರತಿಭಟನಾಕಾರರು ಅಳಲಿಟ್ಟರು.

ಆಶಾ ಕಾರ್ಯಕರ್ತೆಯರು ತಮ್ಮ ಬೇಡಿಕೆಗಳ ಬಗ್ಗೆ ಈ ವರ್ಷದ ಜನವರಿ ತಿಂಗಳಿಂದ ಇಲ್ಲಿಯವರೆಗೆ ಸರ್ಕಾರಕ್ಕೆ ಹತ್ತಾರು ಬಾರಿ ಮನವಿ ಸಲ್ಲಿಸಿದ್ದಾರೆ. ಇಷ್ಟಾದರೂ ನಮ್ಮಗಳ ಸಮಸ್ಯೆ ಬಗ್ಗೆ ಸರ್ಕಾರ ಕನಿಷ್ಟ ಪಕ್ಷ ಸಭೆಯನ್ನು ಕರೆಯುವ ಪ್ರಸ್ತಾಪವನ್ನೂ ಮುಂದಿಟ್ಟಿಲ್ಲ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ತಿಪ್ಪೇಸ್ವಾಮಿ ಅಣಬೇರು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದ ಸಚಿವರಿಗೆ ಮನವಿ ಸಲ್ಲಿಸಲಾಗುತ್ತಿದೆ. ಅಷ್ಟೇ ಅಲ್ಲದೇ ತಹಶೀಲ್ದಾರ್, ಜಿಲ್ಲಾಧಿಕಾರಿಗಳಿಗೂ ಮನವಿ ಕೊಟ್ಟು ಸಮಸ್ಯೆಗಳನ್ನು ಬಗೆಹರಿಸಿಕೊಡುವಂತೆ ಕೇಳಲಾಗಿದೆ. ಇದ್ಯಾವುದಕ್ಕೂ ಸರ್ಕಾರ ಜಗ್ಗುತ್ತಿಲ್ಲ. ಬೇರೆ ಯಾವುದೇ ಪರ್ಯಾಯವಿಲ್ಲದೇ ಆಶಾ ಕಾರ್ಯಕರ್ತೆಯರು ತಮ್ಮ ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆ ಮಾಡುವ ಸ್ಥಿತಿ ಬಂದಿದೆ ಎಂದು ಹೇಳಿದರು.

ಆಶಾ ಕಾರ್ಯಕರ್ತೆಯರ ಸೇವೆಗೆ ನೈಜ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಕೂಡಲೇ ಮಾಸಿಕ 12 ಸಾವಿರ ರೂ. ಗೌರವ ಧನ ನಿಗದಿಪಡಿಸಬೇಕು, ಕೊರೋನಾ ವಿರುದ್ಧ ಹೋರಾಡಲು ಅಗತ್ಯ ಪ್ರಮಾಣದ ಸುರಕ್ಷತಾ ಕಿಟ್ ಒದಗಿಸಬೇಕು ಮತ್ತು ಕೋವಿಡ್‌ಗೆ ತುತ್ತಾದ ಆಶಾ ಕಾರ್ಯಕರ್ತೆಯರಿಗೆ ಪರಿಹಾರ ಮತ್ತು ಸಂಪೂರ್ಣ ಚಿಕಿತ್ಸೆ ನೀಡಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಮುಖಂಡರಾದ ಅನಿತಾ ಆನಗೋಡು, ಕೆ. ಭಾರತಿ, ಮಂಜುನಾಥ ಕುಕ್ಕುವಾಡ, ಸ್ಮಿತಾ, ಸೌಮ್ಯ, ನೀಲಮ್ಮ, ಅನಿತಾ, ದುರ್ಗಮ್ಮ, ಶಕುಂತಲಾ, ನಿರ್ಮಲ, ಆಶಾ, ರುಕ್ಕಮ್ಮ ಪುಷ್ಪಾ, ನೇತ್ರಾವತಿ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**
ಕುವೆಂಪು ನಗರ, 14ನೇ ಮುಖ್ಯ ರಸ್ತೆ, ಎಂಸಿಸಿ 'ಬಿ' ಬ್ಲಾಕ್, ದಾವಣಗೆರೆ 577 004
ದೂರವಾಣಿ ಸಂಖ್ಯೆ : 08192 264056 Email.id : ddwcddavangere.1884@rediffmail.com

ಜಿಲ್ಲಾ ಉಪನಿರ್ದೇಶಕರು, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ದಾವಣಗೆರೆ ಇವರ ಅಧಿಕೃತ ಸರ್ಕಾರಿ ಕರ್ತವ್ಯಕ್ಕಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ಸ್ವಿಫ್ಟ್ ಡಿಸೈರ್ ಕಾರನ್ನು ಒದಗಿಸುವುದಕ್ಕಾಗಿ ಅರ್ಹ ಟೆಂಡರ್‌ದಾರರಿಂದ ಅಲ್ಪಾವಧಿ ಟೆಂಡರ್ ಕರೆಯಲಾಗಿರುತ್ತದೆ. ಆಸಕ್ತರು ಕಛೇರಿ ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಟೆಂಡರ್ ಫಾರಂಗಳನ್ನು ಪಡೆಯಬಹುದಾಗಿರುತ್ತದೆ.

ಸಂಪರ್ಕಿಸಬೇಕಾದ ವಿಳಾಸ : ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 14ನೇ ಮುಖ್ಯರಸ್ತೆ, ಎಂಸಿಸಿ 'ಬಿ' ಬ್ಲಾಕ್, ಕುವೆಂಪು ನಗರ, ದಾವಣಗೆರೆ. ದೂರವಾಣಿ ಸಂಖ್ಯೆ : 08192 264056

# ಆಸ್ತಿ ನೋಂದಣಿ ಕಾರ್ಯ ಸ್ಥಗಿತ ಸಾರ್ವಜನಿಕರ ಪರದಾಟ

**ಜಗಳೂರು**

ಜಗಳೂರು, ಜು.10- ಇಲ್ಲಿನ ಉಪ ನೋಂದಣಿ ಕಚೇರಿಯಲ್ಲಿ ಕಳೆದ ನಾಲ್ಕು ದಿನಗಳಿಂದ ಸ್ಥಿರಾಸ್ತಿ ಪತ್ರಗಳ ನೋಂದಣಿ ಸ್ಥಗಿತಗೊಂಡಿದ್ದು, ಸಾರ್ವಜನಿಕರು ಪರದಾಡುವಂತಾಗಿದೆ.

ಕಳೆದ ನಾಲ್ಕು ದಿನಗಳಿಂದ ಕ್ರಯ, ದಾನ, ಬ್ಯಾಂಕುಗಳ ಆಧಾರ್ ಇತರೆ ಯಾವುದೇ ದಾಖಲೆಗಳ ನೋಂದಣಿ ನಡೆಯುತ್ತಿಲ್ಲ ಎಂದು ನಾಗರಿಕರು ದೂರಿದ್ದಾರೆ.

ಕೋವಿಡ್-19 ಸಮಸ್ಯೆಗಳ ಮಧ್ಯೆಯೂ ಸರ್ಕಾರಕ್ಕೆ ಆದಾಯದ ಮೂಲವಾದ ನೋಂದಣಿ ಇಲಾಖೆಯ ಕಾರ್ಯ ಚಟುವಟಿಕೆ ಗಳಿಗೆ ಅನುಮತಿ ನೀಡಿದೆ. ಆದರೆ, ಕಳೆದ ನಾಲ್ಕೈದು ದಿನಗಳಿಂದ ಯಾವುದೇ ದಸ್ತಾವೇಜು ಗಳ ನೋಂದಣಿ ಆಗದೇ ಇರುವುದರಿಂದ ಸರ್ಕಾರಕ್ಕೂ ಆದಾಯದ ನಷ್ಟ ಉಂಟಾಗಿದೆ.

ರೈತರ ಬ್ಯಾಂಕುಗಳ ಆಧಾರ ಪತ್ರಗಳು, ಕ್ರಯ ಪತ್ರಗಳು ನೋಂದಣಿಯಾಗದೇ ಇರುವುದರಿಂದ ನಾಗರಿಕರು ಕಳೆದ ನಾಲ್ಕೈದು ದಿನಗಳಿಂದ ಕಚೇರಿಗೆ ಅಲೆದಾಡುವುದು ಸಾಮಾನ್ಯವಾಗಿದೆ.

ಕಚೇರಿಯ ಕಂಪ್ಯೂಟರ್‌ಗಳು ಡಾಟಾ ಬ್ಯಾಕಪ್ ತೆಗೆದುಕೊಳ್ಳದ ಹಿನ್ನೆಲೆಯಲ್ಲಿ, ನೋಂದಣಿ ಕಾರ್ಯ ನಿರ್ವಹಿಸಲು ಆಗುತ್ತಿಲ್ಲ. ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲಾಗಿದೆ. ಪರಿಣಿತರಿಂದ ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ. ಶೀಘ್ರವೇ ಸಮಸ್ಯೆ ಪರಿಹಾರವಾಗುವ ಸಂಭವವಿದೆ ಎಂದು ಉಪ ನೋಂದಣಿ ಅಧಿಕಾರಿ ಎಸ್.ಎಂ.ಹೇಮೇಶ್ ಮಾಹಿತಿ ನೀಡಿದ್ದಾರೆ.

## ಕೊರೊನಾ ವಿಮೆ : 29 ಕಂಪನಿಗಳಿಗೆ ಅನುಮತಿ

ನವದೆಹಲಿ, ಜು. 10 – ವಿಮಾ ನಿಯಂತ್ರಕವಾದ ಐ.ಆರ್.ಡಿ.ಎ.ಐ. 29 ಸಾಮಾನ್ಯ ಹಾಗೂ ಆರೋಗ್ಯ ವಿಮಾ ಕಂಪನಿಗಳು ಕೊರೊನಾ ವೈರಸ್ ಚಿಕಿತ್ಸಾ ವೆಚ್ಚ ಭರಿಸುವ ವಿಮೆಗಳನ್ನು ಮಾರಲು ಅನುಮತಿ ನೀಡಿವೆ. ಮೂರೂವರೆ, ಆರೂವರೆ ಹಾಗೂ ಒಂಭತ್ತೂವರೆ ತಿಂಗಳ ಅವಧಿಗಾಗಿ 50 ಸಾವಿರ ರೂ.ಗಳಿಂದ ಹಿಡಿದು 5 ಲಕ್ಷ ರೂ.ಗಳವರೆಗೆ ವಿಮೆ ಮಾರುವುದಾಗಿ ಹಲವಾರು ವಿಮಾ ಕಂಪನಿಗಳು ತಿಳಿಸಿವೆ.

# ಕೋವಿಡ್ ಚಿಕಿತ್ಸಾ ಸಲಕರಣೆಗಳ ಖರೀದಿ ಅವ್ಯವಹಾರ ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಎಐವೈಎಫ್ ಪ್ರತಿಭಟನೆ




**ಹರಪನಹಳ್ಳಿ**

ಹರಪನಹಳ್ಳಿ, ಜು.10- ಕೊರೊನಾ ಚಿಕಿತ್ಸಾ ಸಲಕರಣೆಗಳ ಖರೀದಿಯಲ್ಲಿ ರಾಜ್ಯ ಸರ್ಕಾರದ ಮೇಲೆ ಕೇಳಿಬಂದಿರುವ ಆರೋಪದ ಕುರಿತು ನ್ಯಾಯಾಂಗ ತನಿಖೆಗೆ ಆದೇಶಿಸುವಂತೆ ಮತ್ತು ಜನತೆಯ ಹಿತದೃಷ್ಟಿಯಿಂದ ಎಲ್ಲಾ ಖಾಸಗಿ ಆಸ್ಪತ್ರೆಗಳನ್ನು ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಪಡೆಯುವಂತೆ ಸುಗ್ರೀವಾಜ್ಞೆ ಹೊರಡಿಸುವಂತೆ ಒತ್ತಾಯಿಸಿ, ಅಖಿಲ ಭಾರತ ಯುವಜನ ಫೆಡರೇಷನ್ (ಎಐವೈಎಫ್)ನ ಪದಾಧಿಕಾರಿಗಳು ಇಂದಿಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರ್‌ರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಅಖಿಲ ಭಾರತ ಯುವಜನ ಫೆಡರೇಷನ್ (ಎಐವೈಎಫ್)ನ ರಾಜ್ಯ ಕಾರ್ಯದರ್ಶಿ ಹೆಚ್.ಎಂ.ಸಂತೋಷ್ ಮಾತನಾಡಿ, ವೆಂಟಿಲೇಟರ್, ಪಿ.ಪಿ.ಇ ಕಿಟ್, ಮಾಸ್ಕ್, ಸರ್ಜಿಕಲ್ ಕೈಗವಸು, ಪರೀಕ್ಷೆ ಗವಸು, ಆಮ್ಲಜನಕದ ಸಿಲಿಂಡರ್, ಕೋವಿಡ್ ಪರೀಕ್ಷೆ ಹಾಗೂ ಸೋಂಕಿತರ ದಿನದ ಖರ್ಚುಗಳಲ್ಲಿ ಭಾರೀ ಅಕ್ರಮ ನಡೆಸಿದೆ ಎಂಬ ಗಂಭೀರ ಆರೋಪವನ್ನು ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ. ವಿರೋಧ ಪಕ್ಷದ ಆರೋಪದ ಸತ್ಯಾಸತ್ಯತೆಯನ್ನು ತಿಳಿಯಲು ಈ ಚಿಕಿತ್ಸಾ ಸಲಕರಣೆಗಳ ಖರೀದಿಯ ಸಂಪೂರ್ಣ ವ್ಯವಹಾರವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು.

ಎಐವೈಎಫ್‌ನ ತಾಲ್ಲೂಕು ಅಧ್ಯಕ್ಷ ಎಸ್. ಸುರೇಶ್ ಮಾತನಾಡಿ, ಖಾಸಗಿ ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಚಿಕಿತ್ಸೆ ನೀಡಲು ರಾಜ್ಯ ಸರ್ಕಾರ ಅವಕಾಶ ನೀಡಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಶುಲ್ಕವನ್ನು ನಿಗದಿಪಡಿಸಿದೆ. ಸರ್ಕಾರ ಖಾಸಗಿ ಆಸ್ಪತ್ರೆಗಳಲ್ಲಿ ನಿಗದಿಪಡಿಸಿದ ದರದಂತೆ ಓರ್ವ ಸೋಂಕಿತ ವ್ಯಕ್ತಿಯು ಸಾಮಾನ್ಯ ಸೌಲಭ್ಯ ಪಡೆದು ಗುಣಮುಖನಾಗಲು ಅಂದಾಜು ಲಕ್ಷಕ್ಕೂ ಅಧಿಕ ಹಣವನ್ನು ವ್ಯಯಿಸಬೇಕು. ಅದೇ ಖಾಸಗಿ ಆಸ್ಪತ್ರೆಯಲ್ಲಿ ವಿಶೇಷ ಸೌಲಭ್ಯ ಪಡೆದು ಗುಣಮುಖನಾಗಲು ಅಂದಾಜು ಎರಡರಿಂದ ಎರಡೂವರೆ ಲಕ್ಷ ವ್ಯಯ ಮಾಡಬೇಕು. ಇದು ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಆರ್ಥಿಕವಾಗಿ ಹೊರೆಯಾಗುತ್ತದೆ. ಸರ್ಕಾರವು ಖಾಸಗಿ ಆಸ್ಪತ್ರೆಗಳಿಗೆ ನಿಗದಿ ಪಡಿಸಿದ ಹಣವನ್ನು ಒಬ್ಬ ವ್ಯಕ್ತಿಗೆ ಬರಿಸಲು ಕಷ್ಟವಾಗುತ್ತಿರುವಾಗ, ಈ ಸೋಂಕು ಒಂದೇ ಮನೆಯಲ್ಲಿ ಒಬ್ಬರಿಗಿಂತ ಅಧಿಕ ಜನರಿಗೆ ತಗುಲಿದರೆ, ಆ ಇಡೀ ಕುಟುಂಬವು ಚಿಕಿತ್ಸೆ ಪಡೆಯಲು, ತಮ್ಮ ಜೀವಮಾನದ ಸಂಪಾದನೆಯ ಜೊತೆಗೆ ಸಾಲವನ್ನೂ ಮಾಡಬೇಕಾಗುತ್ತದೆ ಎಂದರು.

ಸಂಘಟನಾ ಕಾರ್ಯದರ್ಶಿ ಮುಜೀಬುರ್ ರೆಹಮಾನ್ ಮಾತನಾಡಿ, ರಾಜ್ಯದಲ್ಲಿ ಕೊರೊನಾ ವೇಗವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಜನರಿಗೆ ಸರಿಯಾದ ಚಿಕಿತ್ಸೆಗಳು ದೊರಕುತ್ತಿಲ್ಲ. ಚಿಕಿತ್ಸೆ ದೊರಕದ ಕಾರಣಕ್ಕೆ ಹಲವರು ಪ್ರಾಣ ಕಳೆದು ಕೊಂಡಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕಾಶೀನಾಥ್, ರಾಮಕೃಷ್ಣ, ಮಹ್ಮದ್, ಮುಬಾರಕ್, ಯಾಸೀನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಬ್ಯಾಂಕ್ ಕಸ್ಟಮರ್ ಕೇರ್ ಅಧಿಕಾರಿ ಸೋಗಿನಲ್ಲಿ ವಂಚನೆ

ದಾವಣಗೆರೆ, ಜು.10- ಬ್ಯಾಂಕ್‌ವೊಂದರ ಕಸ್ಟಮರ್ ಕೇರ್ ಅಧಿಕಾರಿ ಸೋಗಿನಲ್ಲಿ ಖಾಸಗಿ ಗ್ಯಾಸ್ ಕಂಪನಿ ನೌಕರನೋರ್ವನ ಬ್ಯಾಂಕ್ ಖಾತೆಯಲ್ಲಿನ ಸುಮಾರು 88 ಸಾವಿರ ನಗದನ್ನು ಆನ್ ಲೈನ್ ಮುಖಾಂತರ ದೋಚಿರುವ ಘಟನೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಜಗಳೂರು ಟೌನ್ ಮುಸ್ಲಿಂ ಕಾಲೋನಿ ವಾಸಿ ದಾದಾಪೀರ್ ಹಣ ಕಳೆದುಕೊಂಡ ಖಾಸಗಿ ಗ್ಯಾಸ್ ಕಂಪನಿ ನೌಕರ.

ಮೊನ್ನೆ ದಿನಾಂಕ 7ರಂದು ತನ್ನ ಸ್ನೇಹಿತನ ಖಾತೆಯುಳ್ಳ ಬ್ಯಾಂಕ್ ಎಟಿಎಂ ಕಾರ್ಡ್ ನಿಂದ ಜಗಳೂರಿನಲ್ಲಿರುವ ಬೇರೊಂದು ಬ್ಯಾಂಕ್ ಎಟಿಎಂನಲ್ಲಿ ಒಂದು ಸಾವಿರ ಹಣ ಬಿಡಿಸಲು ಪ್ರಯತ್ನಿಸಿದಾಗ ಹಣ ಬರಲಿಲ್ಲ. ಆದರೆ, ಸ್ನೇಹಿತನ ಬ್ಯಾಂಕ್ ಖಾತೆಯಿಂದ ಹಣ ಕಡಿತವಾಗಿದ್ದು, ಹಣ ವಾಪಸ್ ಬರಬಹುದೆಂದು ಕಾದರೂ ಹಣ ವಾಪಸ್ ಬರದಿದ್ದಾಗ ಎಟಿಎಂನಿಂದ ವಾಪಸ್ ಹೋದೆ.

ಎರಡು ದಿನಗಳ ನಂತರ ಹಣ ವಾಪಸ್ ಬಾರದ ಕಾರಣ ಮೊಬೈಲ್‌ನಲ್ಲಿ ಬ್ಯಾಂಕ್ ಕಸ್ಟಮರ್ ಕೇರ್ ನಂಬರ್ ಗೆ ಸಂಪರ್ಕಿಸಿದಾಗ ಈ ವಂಚನೆ ನಡೆದಿದೆ ಎಂದು ದಾದಾಪೀರ್ ದೂರಿನಲ್ಲಿ ವಿವರಿಸಿದ್ದಾರೆ.

# ವೈದ್ಯ ವಿದ್ಯಾರ್ಥಿಗಳಿಂದ ಒಪಿಡಿ ಸೇವೆ ಸ್ಥಗಿತ




**ಕೋವಿಡ್ ಸೇವೆ ಹೊರತುಪಡಿಸಿ ತುರ್ತು, ಹೆರಿಗೆ ಸೇವೆಗಳು ಸೇರಿದಂತೆ ಎಲ್ಲಾ ವೈದ್ಯಕೀಯ ಸೇವೆ ಸ್ಥಗಿತದ ಎಚ್ಚರಿಕೆ**


ದಾವಣಗೆರೆ, ಜು.10- ಶಿಷ್ಯ ವೇತನಕ್ಕೆ ಆಗ್ರಹಿಸಿ ನಗರದಲ್ಲಿ ಜೆಜೆಎಂ ಮೆಡಿಕಲ್ ಕಾಲೇಜಿನ ಸ್ನಾತಕೋತ್ತರ ಮತ್ತು ಗೃಹ ವೈದ್ಯ ವಿದ್ಯಾರ್ಥಿಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ ಇಂದಿಗೆ 12ನೇ ದಿನಕ್ಕೆ ಕಾಲಿಟ್ಟಿದ್ದು, ಕೋವಿಡ್ ಸೇವೆ ಹೊರತುಪಡಿಸಿ, ಹೊರ ರೋಗಿಗಳ ವಿಭಾಗದ (ಒಪಿಡಿ) ಎಲ್ಲಾ ವೈದ್ಯಕೀಯ ಸೇವೆಗಳನ್ನು ಸ್ಥಗಿತಗೊಳಿಸಿ ಹೋರಾಟ ತೀವ್ರಗೊಳಿಸಿದ್ದಾರೆ.

ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ವಿದ್ಯಾರ್ಥಿಗಳು ಮಳೆಯನ್ನೂ ಲೆಕ್ಕಿಸದೇ ಛತ್ರಿ ಹಿಡಿದುಕೊಂಡು ಮತ್ತು ನೆನೆಯುತ್ತಾ ಮುಷ್ಕರ ನಡೆಸಿದರು.

ಇದೇ ವೇಳೆ ಸಾರ್ವಜನಿಕರಿಗೆ ಸ್ಯಾನಿಟೈಸರ್, ಮಾಸ್ಕ್ ಗಳನ್ನು ವಿತರಿಸಿ, ಕೊರೊನಾ ಸೋಂಕು ಹರಡದಂತೆ ಸಂರಕ್ಷಿಸಿಕೊಳ್ಳುವ ಬಗ್ಗೆ ಅಗತ್ಯ ರಕ್ಷಣಾ ಕ್ರಮಗಳ ಕುರಿತು ಜನಜಾಗೃತಿ ಮೂಡಿಸಿದರು. ಸಂಜೆ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಿಸಿದರು.

ಇಂದಿನಿಂದ ಒಪಿಡಿಯಲ್ಲಿ ಚಿಕಿತ್ಸೆಯನ್ನು ಸ್ಥಗಿತಗೊಳಿಸಿದ್ದು, ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಲು ಮುಂದಾಗದೇ ಇದ್ದರೆ ಇನ್ನೆರಡು ದಿನಗಳವರೆಗೆ ಕಾದು ನಂತರ ಕೋವಿಡ್ ಸೇವೆ ಹೊರತುಪಡಿಸಿ ತುರ್ತು ಮತ್ತು ಹೆರಿಗೆ ಸೇವೆಗಳು ಸೇರಿದಂತೆ ಎಲ್ಲಾ ವೈದ್ಯಕೀಯ ಸೇವೆಗಳನ್ನು ಸ್ಥಗಿತಗೊಳಿಸುವುದಾಗಿ ವೈದ್ಯಕೀಯ ವಿದ್ಯಾರ್ಥಿ ಡಾ. ಹರೀಶ್ ಎಚ್ಚರಿಸಿದ್ದಾರೆ.

## ಕಾಗಿನೆಲೆ ಕನಕ ಗುರುಪೀಠಗಳಲ್ಲಿ ಭಕ್ತರ ಪ್ರವೇಶಕ್ಕೆ ತಾತ್ಕಾಲಿಕ ನಿಷೇಧ



ಹಾವೇರಿ, ಜು.10- ಹೆಮ್ಮಾರಿ ಕೊರೊನಾ ವೈರಸ್ ದಿನೇ ದಿನೇ ಎಲ್ಲಾ ಕಡೆ ಹೆಚ್ಚಾಗುತ್ತಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಕಾಗಿನೆಲೆ ಕನಕ ಗುರು ಪೀಠಗಳಿಗೆ ತಾತ್ಕಾಲಿಕವಾಗಿ ಭಕ್ತರ ಪ್ರವೇಶವನ್ನು ನಿಷೇಧಿಸಲಾಗಿದೆ ಎಂದು ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ತಿಳಿಸಿದ್ದಾರೆ. ಕಾಗಿನೆಲೆಯಲ್ಲಿರುವ ಕನಕ ಗುರುಪೀಠ, ದೇವಸ್ಥಾನಗಳಲ್ಲಿ ಮತ್ತು ಮೈಲಾರ ಹಾಗೂ ಬೆಳ್ಳೂಡಿ ಶಾಖಾ ಮಠಗಳಲ್ಲಿ ದರ್ಶನಾಶೀರ್ವಾದವನ್ನು ನಿಷೇಧಿಸಿರುವ ಕಾರಣ ಭಕ್ತರು ಮುಂದಿನ ಪ್ರಕಟಣೆವರೆಗೂ ಸಹಕರಿಸಬೇಕೆಂದು ಶ್ರೀಗಳು ಮನವಿ ಮಾಡಿದ್ದಾರೆ.

# ಗ್ಯಾಂಗ್‌ಸ್ಟರ್ ವಿಕಾಸ್ ದುಬೆ ಪೊಲೀಸ್ ಎನ್‌ಕೌಂಟರ್‌ಗೆ ಬಲಿ



ಕಾನ್‌ಪುರ, ಜು. 10 - ಉಜ್ಜೈನಿಯಲ್ಲಿ ನಿನ್ನೆ ಬಂಧಿತನಾಗಿದ್ದ ಗ್ಯಾಂಗ್‌ಸ್ಟರ್ ವಿಕಾಸ್ ದುಬೆ ಶುಕ್ರವಾರ ಪೊಲೀಸರ ಗುಂಡಿಗೆ ಬಲಿಯಾಗಿದ್ದಾನೆ. ಆತನನ್ನು ಇಲ್ಲಿಗೆ ಕರೆ ತರುತ್ತಿರುವಾಗ ಜೀಪ್ ಉರುಳಿದ ವೇಳೆ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಗುಂಡು ಹಾರಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಕಾನ್‌ಪುರದ ಭೌಂತಿ ಎಂಬಲ್ಲಿ ಆತನನ್ನು ಕರೆ ತರುತ್ತಿದ್ದ ಎಸ್.ಯು.ವಿ. ಅಪಘಾತವಾಗಿ ರಸ್ತೆ ಬದಿಗೆ ಉರುಳಿದೆ. ಮಳೆಯ ಕಾರಣದಿಂದಾಗಿ ರಸ್ತೆ ಜಾರುತ್ತಿತ್ತು. ಈ ಕಾರಿನ ಜೊತೆ ಪೊಲೀಸರ ಕೆಲ ವಾಹನಗಳೂ ಇದ್ದವು.

ಈ ಸಂದರ್ಭದಲ್ಲಿ ದುಬೆ ಪೊಲೀಸ್ ಒಬ್ಬರಿಂದ ಬಂದೂಕು ಕಸಿದುಕೊಂಡ ಹಾಗೂ ಕೆಲ ಪೊಲೀಸರ ಮೇಲೆ ಗುಂಡು ಹಾರಿಸಿ ತಪ್ಪಿಸಿಕೊಳ್ಳುವ ಯತ್ನ ನಡೆಸಿದ ಎಂದು ಪೊಲೀಸರು ಹೇಳಿದ್ದಾರೆ. ಬೆಳಗಿನ ಜಾವ 6 ಗಂಟೆಗೆ ನಡೆದ ಈ ಅಪಘಾತ ಹಾಗೂ ದುಬೆ ನಡೆಸಿದ ಗುಂಡಿನ ದಾಳಿಯಲ್ಲಿ ಆರು ಪೊಲೀಸರು ಗಾಯಗೊಂಡಿದ್ದಾರೆ. ಇವರಲ್ಲಿ ಇಬ್ಬರು ವಿಶೇಷ ಕಾರ್ಯಪಡೆಗೆ ಸೇರಿದವರು.

ಕಾನ್‌ಪುರದ ಬಿಕ್ರು ಹಳ್ಳಿಯಲ್ಲಿ ಜುಲೈ 2ರಂದು ಎಂಟು ಪೊಲೀಸರನ್ನು ದುಬೆ ವ್ಯಕ್ತಿಗಳು ಹತ್ಯೆಗೈದಿದ್ದರು. ಆನಂತರ ದುಬೆಯ ಆರು ಬಂಟರನ್ನು ಪೊಲೀಸರು ಹೊಡೆದುರುಳಿಸಿದ್ದಾರೆ.

ಕಾರ್ಯಾಚರಣೆಯ ಬಗ್ಗೆ ಪ್ರತಿಪಕ್ಷಗಳು ಉತ್ತರ ಪ್ರದೇಶದ ಬಿಜೆಪಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿವೆ. ಈ ಘಟನೆಯ ಬಗ್ಗೆ ಸುಪ್ರೀಂ ಕೋರ್ಟ್ ನೇತೃತ್ವದ ತನಿಖೆ ನಡೆಸಬೇಕು ಎಂದು ಬಿ.ಎಸ್.ಪಿ. ಅಧ್ಯಕ್ಷೆ ಮಾಯಾವತಿ ಒತ್ತಾಯಿಸಿದ್ದಾರೆ. ಅಪರಾಧಿ ಹೋಗಿದ್ದಾನೆ. ಆದರೆ, ಆತನನ್ನು ರಕ್ಷಿಸಿದವರ ಬಗ್ಗೆ ಏನು? ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಪ್ರಶ್ನಿಸಿದ್ದಾರೆ. ದುಬೆಗೆ ರಕ್ಷಣೆ ನೀಡಲಾಗುತ್ತಿದೆ. ಈ ಬಗ್ಗೆ ಸಿಬಿಐ ತನಿಖೆ ನಡೆಸಬೇಕು ಎಂದು ವಾದ್ರಾ ಇದಕ್ಕೂ ಮುನ್ನಾ ದಿನ ಹೇಳಿದ್ದರು.

## ಜಾಮೀನಿಗೆ ಜಾಲತಾಣ ಬಳಸದಂತೆ ನಿರ್ಬಂಧ; ಸುಪ್ರೀಂ ಪರಿಶೀಲನೆ

ನವದೆಹಲಿ, ಜು. 10 – ಜಾಮೀನು ನೀಡುವಾಗ ಸಾಮಾಜಿಕ ಜಾಲತಾಣ ಬಳಸದಂತೆ ನಿರ್ಬಂಧಿಸುವ ಷರತ್ತು ವಿಧಿಸಲು ಸಾಧ್ಯವೇ ಎಂಬ ವಿಷಯವನ್ನು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ. ಮೇ 20ರಂದು ದೇಶದ್ರೋಹದ ಆರೋಪ ಎದುರಿಸುತ್ತಿದ್ದ ವ್ಯಕ್ತಿಗೆ ಜಾಮೀನು ನೀಡಿದ್ದ ಅಲಹಾಬಾದ್ ಹೈಕೋರ್ಟ್, ಸಾಮಾಜಿಕ ಜಾಲತಾಣ ಬಳಸದಂತೆ ನಿರ್ಬಂಧ ಹೇರಿತ್ತು. ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ.

ಜೂನ್ 1ರಂದು ಆದೇಶ ಹೊರಡಿಸಿದ್ದ ಹೈಕೋರ್ಟ್, 18 ತಿಂಗಳ ಅವಧಿಗೆ ಇಲ್ಲವೇ ವಿಚಾರಣೆ ಪೂರ್ಣಗೊಳ್ಳುವುದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಸಾಮಾಜಿಕ ಜಾಲತಾಣ ಬಳಸದಂತೆ ತಿಳಿಸಿತ್ತು.

## ಲಡಾಖ್‌ನಿಂದ ಸೈನ್ಯ ವಾಪಸ್ ಪಡೆಯಲು ನಿರ್ಧಾರ

ನವದೆಹಲಿ, ಜು. 10 – ಪೂರ್ವ ಲಡಾಖ್‌ನಲ್ಲಿ ಕಾಲ ಮಿತಿಯಲ್ಲಿ ಸೈನ್ಯವನ್ನು ವಾಪಸ್ ಪಡೆಯಲು ಹಾಗೂ ನಿಯಂತ್ರಣ ರೇಖೆಯಲ್ಲಿ ಶಾಂತಿ ಕಾಯ್ದುಕೊಳ್ಳಲು ಭಾರತ ಹಾಗೂ ಚೀನಾ ನಿರ್ಧರಿಸಿವೆ. ಈ ನಡುವೆ, ಚೀನಾ ಸೈನ್ಯವನ್ನು ಹಲವು ತಾಣಗಳಿಂದ ಹಿಂದಕ್ಕೆ ಕರೆಸಿಕೊಳ್ಳುತ್ತಿರುವ ಬಗ್ಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಮಗ್ರ ಪರಿಶೀಲನೆ ನಡೆಸಿದ್ದಾರೆ.ಉಭಯ ದೇಶಗಳು ರಾಯಭಾರಿ ಹಂತದ ಮಾತುಕತೆ ನಡೆಸಿವೆ ಹಾಗೂ ಉಭಯ ಸೈನ್ಯಗಳ ಹಿರಿಯ ಕಮಾಂಡರ್‌ಗಳು ಶೀಘ್ರವೇ ಸಭೆ ನಡೆಸಿ ಪೂರ್ಣ ಪ್ರಮಾಣದಲ್ಲಿ ಸೈನ್ಯ ಹಿಂದಕ್ಕೆ ಕರೆಸಿಕೊಳ್ಳಲು ಚರ್ಚಿಸಬೇಕೆಂದು ನಿರ್ಧರಿಸಲಾಗಿದೆ.

# ಜಲಸಿರಿ ಯೋಜನೆ ಕಾಮಗಾರಿ ಪರಿಶೀಲಿಸಿದ ಶಾಸಕರು, ಮೇಯರ್



ದಾವಣಗೆರೆ, ಜು.10- ನಗರದ ಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಜಲಸಿರಿ ಯೋಜನೆಯಡಿ ಕುಂದುವಾಡ ಕೆರೆಯನ್ನು 13 ಕೋಟಿ ರೂ. ಮೊತ್ತದಲ್ಲಿ ಕೆರೆಯ ಸ್ವಚ್ಛತೆ, ಏರಿ ದುರಸ್ತಿ, ಲೈಟಿಂಗ್ ವ್ಯವಸ್ಥೆ, ಸಸಿಗಳನ್ನು ನೆಡಲಾಗುತ್ತದೆ. ಕುಂದುವಾಡ ಕೆರೆಯ ಬಳಿ 1.42 ಕೋಟಿ ರೂ. ಮೊತ್ತದಲ್ಲಿ ರಾಜನಹಳ್ಳಿಯಿಂದ 20 ಎಂ.ಎಲ್.ಡಿ ಸಬ್‌ಲೈನ್ ಮೂಲಕ ನಗರಕ್ಕೆ ಕುಡಿಯುವ ನೀರನ್ನು ತರುವ ಕಾಮಗಾರಿಯನ್ನು ಶಾಸಕ ಎಸ್.ಎ.ರವೀಂದ್ರನಾಥ್, ಮಹಾಪೌರ ಬಿ.ಜಿ.ಅಜಯ್‌ಕುಮಾರ್ ಅವರುಗಳು ಇಂದು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಜಯಪ್ರಕಾಶ್, ಸ್ಮಾರ್ಟ್ ಸಿಟಿಯ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಮತ್ತಿತರರು ಉಪಸ್ಥಿತರಿದ್ದರು.






# ರಾಣೇಬೆನ್ನೂರು : ಕಸದ ಗೂಡಾಗಿರುವ ಮದಗದ ಕೆರೆ



ರಾಣೇಬೆನ್ನೂರು, ಜು.10- ಮೈದುಂಬಿ ಹರಿಯುವಾಗ ಜನಪ್ರತಿನಿಧಿಗಳು, ರಾಜಕಾರಣಿಗಳ (ಚುನಾವಣಾ ಗಿಮಿಕ್‌ಗಾಗಿ) ಜೊತೆಗೆ ಸ್ವಾಮೀಜಿಗಳಿಂದಲೂ ಪೂಜೆಗೊಳ್ಳುವ ಸಡಗರ ಸಂಭ್ರಮದಿಂದ ಬಾಗಿನ ಅರ್ಪಿಸುವಂತಹ ಅದ್ದೂರಿ ಕಾರ್ಯಕ್ರಮಗಳು ನಡೆಯುತ್ತವೆ.

ಆದರೆ ಒಡಲೊಳಗಿನ ನೀರು ಖಾಲಿಯಾದಾಗ ಅದೇ ನದಿಗಳು ಕಸ ಎಸೆಯುವ ತಿಪ್ಪೆಗಳಾಗುತ್ತವೆ. ರಟ್ಟಿಹಳ್ಳಿ ತಾಲ್ಲೂಕಿನ ಮದಗದ ಕೆರೆಯಿಂದ ಹುಟ್ಟುವ ಕುಮದ್ವತಿ ನದಿಯು ಮಳೆಗಾಲದಲ್ಲಿ ಮೈದುಂಬಿಕೊಳ್ಳುತ್ತದೆ.

ಮದಗದಲ್ಲಿ ಹುಟ್ಟಿ ರಾಣೇಬೆನ್ನೂರು ತಾಲ್ಲೂಕಿನ ಮುದೇನೂರು ಮತ್ತು ಹೊಳೆಆನ್ವೇರಿ ಮಧ್ಯದಲ್ಲಿ ತುಂಗಭದ್ರೆ ಸೇರಿಕೊಳ್ಳು ವವರೆಗೆ 2 ತಾಲ್ಲೂಕುಗಳ 30ಕ್ಕೂ ಅಧಿಕ ಗ್ರಾಮಗಳ ಸಾವಿರಾರು ಎಕರೆ ಜಮೀನುಗಳಿಗೆ, ಜನ ಜಾನುವಾರುಗಳಿಗೆ ನೀರುಣಿಸುತ್ತಿದೆ.

ಬೇಸಿಗೆ ಬರುವ ಮುನ್ನವೇ ಕೆರೆಯ ನೀರು ಕಡಿಮೆಯಾಗುತ್ತಿದ್ದಂತೆ ನದಿ ಬತ್ತತೊಡಗಿದಾಗ ನಮ್ಮಲ್ಲಿರುವ ಧಾರ್ಮಿಕ ಮನೋಭಾವವೂ ಬತ್ತುತ್ತದೆ. ದಡದಲ್ಲಿರುವ ಗ್ರಾಮಗಳ ಜನರಿಗೆ ನದಿಯ ಒಡಲು ತಿಪ್ಪೆ ಗುಂಡಿಯಾಗಿ, ಚರಂಡಿ ನೀರು ಬಿಡಲು ರಾಜಕಾಲುವೆಯಾಗಿ ಮಾರ್ಪಾಡಾಗುತ್ತದೆ. ಮಳೆ ಬಂದು ಮೈದುಂಬಿದ ನಂತರ ಇದೆಲ್ಲಾ ಹರಿದು ತುಂಗಭದ್ರೆಯ ಒಡಲು ಸೇರುತ್ತದೆ.

ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸರ್ಕಾರಗಳು ಈ ಬಗ್ಗೆ ಕಠಿಣ ನಿಲುವಿನೊಂದಿಗೆ ಕ್ರಮಕೈಗೊಳ್ಳಬೇಕು. ಈ ಬಗ್ಗೆ ಧಾರ್ಮಿಕ, ಸಾಮಾಜಿಕ ಚಿಂತನೆಯ ಜನಪ್ರತಿನಿಧಿಗಳು ಸಹ ಇತ್ತ ದೃಷ್ಟಿ ಹರಿಸಬೇಕು. ತಪ್ಪೆಸಗುವವರ ವಿರುದ್ಧ ಕ್ರಮ ಜರುಗಿಸಬೇಕು.

JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte